5

# ಅಚಲ

ತಿಂಗಳ ಪತ್ರಿಕೆ

ಬಿಡಿಪ್ರತಿ : 4 ರೂ.

ಮೇ - 2005

## ಒಳಗೇನಿದೆ



ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

# ಅಚಲ

ಸಂಪುಟ - 20 ಸಂಚಿಕೆ : 5

*ಸಂಪಾದಕ ಮಂಡಲಿ*

ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಶಾಂತಾ ನಾಗರಾಜ್
ಹೆಚ್. ಎನ್. ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10/- ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು.
ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.
ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004


## ಅಭಿನಂದನೆ

- ಕನ್ನಡದ ಮೊದಲ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮಹಿಳೆಯೆಂಬ ಖ್ಯಾತಿಗೆ ಪಾತ್ರರಾದ ಮತ್ತು ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಮೊದಲ ಮಹಿಳೆಯೆನಿಸಿಕೊಂಡ ಶ್ರೀಮತಿ ಗೀತಾ ನಾಗಭೂಷಣರವರಿಗೆ 'ಅನುಪಮಾ ಪ್ರಶಸ್ತಿ' ಪಡೆದ ಸಂದರ್ಭದಲ್ಲಿ

- ಈ ವರ್ಷದ ಟಿಎಸ್ಸಾರ್ ಪ್ರಶಸ್ತಿ ಪಡೆದ ಹಿರಿಯ ಪತ್ರಕರ್ತೆ ಶ್ರೀಮತಿ ನಾಗಮಣಿ ಎಸ್. ರಾವ್‌ರವರಿಗೆ

- ಶಿವರಾಮಕಾರಂತ ಪ್ರತಿಷ್ಠಾನದ ಪ್ರಶಸ್ತಿಯಿಂದ ಸನ್ಮಾನಿತರಾದ ಹಿರಿಯ ಲೇಖಕಿ ಶ್ರೀ ಎಚ್.ಎಸ್. ಪಾರ್ವತಿಯವರಿಗೆ,

- ಈ ವರ್ಷದ ಕರ್ನಾಟಕ ಸರ್ಕಾರದ 'ಬಸವಶ್ರೀ' ಪ್ರಶಸ್ತಿಗೆ ಪಾತ್ರರಾದ ಶ್ರೀಮತಿ ಎಸ್.ಜಿ. ಸುಶೀಲಮ್ಮನವರಿಗೆ.


**ಅಚಲ ವಿಳಾಸ**

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ
ಬನಶಂಕರಿ 3ನೇ ಹಂತ, ಬೆಂಗಳೂರು - 560 085

## ಸಂಪಾದಕೀಯ

# ಬಾಲ್ಯ ವಿವಾಹದ ನಿವಾರಣೆಯ ಹಾದಿ ಬಲುದೂರ

ಇತ್ತೀಚೆಗೆ ಮಧ್ಯಪ್ರದೇಶದ ಧಾರ್ ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಹಿಳಾ ಮೇಲ್ವಿಚಾರಕಿ ಶಕುಂತಲಾ ವರ್ಮ ಅವರ ಕೈಗಳನ್ನು ಕೊಚ್ಚಿ ಹಾಕುವ ಪ್ರಯತ್ನ ನಡೆದಿದ್ದು ಅವರ ಮೇಲೆ ಮಾರಣಾಂತಿಕವಾದ ಹಲ್ಲೆ ನಡೆದಿದೆ. ಶಕುಂತಲಾ ವರ್ಮ ಅವರು ತಮ್ಮ ವ್ಯಾಪ್ತಿಯ ಪ್ರದೇಶದಲ್ಲಿ ನಡೆದಿರುವ ಮತ್ತು ನಡೆಯಬಹುದಾದ ಬಾಲ್ಯವಿವಾಹಗಳ ಬಗ್ಗೆ ವಿಚಾರಣೆ ನಡೆಸಿ ಅಧ್ಯಯನ ಮಾಡಿ ಸರಕಾರಕ್ಕೆ ವರದಿ ನೀಡುವ ಕಾರ್ಯದಲ್ಲಿ ತೊಡಗಿದ್ದರೆಂಬುದೇ ಈ ಕೃತ್ಯಕ್ಕೆ ಕಾರಣವಾಗಿದೆ. ಅಕ್ಷಯ ತದಿಗೆಯಂದು ಯಾವುದೇ ಪುರೋಹಿತರ ಅದ್ದೂರಿ ಆಡಂಬರಗಳಿಲ್ಲದೆ ಮದುವೆ ನಡೆಸಬಹುದಾದ್ದರಿಂದ ಸಾಕಷ್ಟು ಬಾಲ್ಯವಿವಾಹಗಳು ನಡೆಯುವುದು ಪದ್ಧತಿ. ಈ ಹಿನ್ನೆಲೆಯಲ್ಲಿ ಅಕ್ಷಯ ತದಿಗೆಯ ಹಿಂದಿನ ದಿನ ಶಕುಂತಲಾ ವರ್ಮ ಅವರ ಮೇಲೆ ಹಲ್ಲೆ ನಡೆದಿರುವುದು ಸೇಡಿನ ಕ್ರಮವೆಂಬುದು ಸೂರ್ಯಸ್ಪಷ್ಟ ಆದರೆ ಶಕುಂತಲಾರ ಮೇಲಿನ ಹಲ್ಲೆಗೂ ರಾಜ್ಯದಲ್ಲಿ ನಡೆಯುತ್ತಿರುವ ಬಾಲ್ಯವಿವಾಹಗಳಿಗೂ ಏನೂ ಸಂಬಂಧವಿಲ್ಲವೆಂದು ಹೇಳಿ, ಬಾಲ್ಯವಿವಾಹವನ್ನು ಕುರಿತಂತೆ ಆ ರಾಜ್ಯದ ಮುಖ್ಯ ಮಂತ್ರಿಗಳು ಹೇಳಿರುವ ಮಾತುಗಳು ಅತ್ಯಂತ ಬೇಜವಾಬ್ದಾರಿಯಿಂದ ಕೂಡಿದವಾಗಿವೆ.

'ಬಾಲ್ಯ ವಿವಾಹ' ಎಂಬ ಸಾಮಾಜಿಕ ಪಿಡುಗನ್ನು ಕಿತ್ತೊಗೆಯುವುದು ಸಾಧ್ಯವಿಲ್ಲ - ಎಂದು ಮಧ್ಯಪ್ರದೇಶದ ಮುಖ್ಯಮಂತ್ರಿ ಬಾಬು ಲಾಲ್ ಗೌರ್ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದು ಪತ್ರಿಕೆಯಲ್ಲಿ ವರದಿಯಾಗಿದೆ. ರಾಜಕೀಯ ಸಂಕಲ್ಪವಿಲ್ಲದೆ ಆಡಳಿತ ನಡೆಸುವ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದವರು ಹೇಳಿದರೆಂದು ವರದಿಯಾಗಿರುವ ಮಾತುಗಳು ಆತಂಕವನ್ನು ಹುಟ್ಟಿಸುವುದಷ್ಟೇ ಅಲ್ಲ, ಈ ದೇಶದಲ್ಲಿ ಸಾಮಾಜಿಕ ಅನಿಷ್ಟಗಳ ನಿವಾರಣೆ ಎಷ್ಟೊಂದು ಕಠಿಣ, ಎಂಬುದನ್ನು ಬಯಲು ಮಾಡುತ್ತದೆ. 'ಬಾಲ್ಯ ವಿವಾಹವನ್ನು ತಡೆಯಲು ಆಗದ ಮಾತು. ಮದ್ಯಪಾನ, ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಸಾಧ್ಯವಾಗಿದೆಯೇ? ಗಾಂಧೀಜಿ ಅವರಿಗೇ ಇದು ಸಾಧ್ಯವಾಗಿಲ್ಲ ಎಂದ ಮೇಲೆ ಬಾಬು ಲಾಲ್ ಗೌರ್‌ಗೆ ಸಾಧ್ಯವಾಗುವುದು ಹೇಗೆ?' ಎಂದು ನುಡಿದಿರುವುದು ಶೋಚನೀಯವಾದದ್ದು.

ಈ ಇಡೀ ಪ್ರಸಂಗ ಎರಡು ವಿಷಯಗಳನ್ನು ಸ್ಪಷ್ಟ ಪಡಿಸುತ್ತದೆ. ನಮ್ಮ ದೇಶದಲ್ಲಿ ಕಾನೂನು, ಸಂವಿಧಾನಕ್ಕಿಂತ ಸಂಪ್ರದಾಯ ಆಚರಣೆಗಳ ಕೈ ಮೇಲು. ರೂಢಿ ಸಂಪ್ರದಾಯಗಳ ದಾಸರಾಗಿ ಮನುಷ್ಯತ್ವವನ್ನು ಚಿತೆಗೇರಿಸುವ ನಮ್ಮ ಜನ ಸಮುದಾಯದ ನಡುವೆ ಜಾಗೃತಿಯ ಘಂಟೆ ಎಷ್ಟು ಶಕ್ತವಾಗಿ ಮೊಳಗಬೇಕಾಗಿದೆ ಎಂದು ವಿವರಿಸಿ ಹೇಳಬೇಕಾಗಿಲ್ಲ. ಹಾಗೆಯೇ ಸಾಂಪ್ರದಾಯಿಕ ಅನಿಷ್ಟಗಳ ವಿರುದ್ಧ ಹೋರಾಡುವವರಿಗೆ ಸಮಾಜವಾಗಲಿ, ಸರ್ಕಾರವಾಗಲಿ ನೀಡುವ ನೈತಿಕ ಬಲವಾದರೂ ಎಂತಹುದು? ಈ ಶಕುಂತಲಾರವರ ಪ್ರಕರಣದಲ್ಲಿ ಶಕುಂತಲಾ ಮೇಲೆ ನಡೆದ ಹಲ್ಲೆಗೂ ಬಾಲ್ಯ ವಿವಾಹ ನಿಷೇಧ ಕಾರ್ಯಕ್ರಮಕ್ಕೂ ಸಂಬಂಧವಿಲ್ಲವೆನ್ನುವ ರಾಜಕಾರಣಿಗಳು ಸಾಧಿಸುವುದಾದರೂ ಏನನ್ನು? ಜನ ಜಾಗೃತಿಯ ಕಾರ್ಯಕ್ರಮದ ಅಗತ್ಯವಿದೆಯೆಂದು ಒಪ್ಪಿಕೊಳ್ಳುವ ಈ ರಾಜಕಾರಣಿಗಳು ಸಾಮಾಜಿಕ ಕಾರ್ಯಕರ್ತರಿಗೆ ನೀಡುವ ಪ್ರೋತ್ಸಾಹ ಮತ್ತು ರಕ್ಷಣೆಯಾದರೂ ಎಂತಹುದು? ಈ ಪ್ರಶ್ನೆಗಳು ಸಾಮಾಜಿಕ ಕಾರ್ಯಕರ್ತರನ್ನು ಕಾಡುವುದಷ್ಟೇ ಅಲ್ಲ, ಅವರನ್ನು ಇಂತಹ ಚಟುವಟಿಕೆಗಳಿಗೆ ಬೆನ್ನು ತಿರುಗಿಸುವಂತೆ ಮಾಡುತ್ತದೆ. ಇದು ನಿಜಕ್ಕೂ ಮಹಿಳಾ ಸಶಕ್ತೀಕರಣದ ಹಾದಿಯಲ್ಲಿ ಒಂದು ಹಿನ್ನಡೆಯ ಹೆಜ್ಜೆ.

ಒಂದು ದಶಕದ ಹಿಂದೆ ಬಾಲ್ಯ ವಿವಾಹ ನಿಲ್ಲಿಸಲು ಹೋದ ರಾಜಸ್ಥಾನದ ಭತೇರಿ ಗ್ರಾಮದ ಭಾಂವ್ರಿದೇವಿಗೊದಗಿದ ಸ್ಥಿತಿ ಇನ್ನು ಜನಮಾನಸದಿಂದ ಮರೆವೆಯಾಗಿಲ್ಲ. ಸಮಾಜದ ಪ್ರತಿಷ್ಠರ ಮನೆಯಲ್ಲಿ ಶಿಶು ವಿವಾಹವನ್ನು ನಿಲ್ಲಿಸ ಹೋದ ಭಾಂವ್ರಿದೇವಿಯು ಸಾಥಿನ್, ಸರ್ಕಾರದ ಉದ್ಯೋಗಿಯೇ. ಅವಳ ಮೇಲೆ ಊರ ವರಿಷ್ಠರಿಂದ ಸಾಮೂಹಿಕ ಅತ್ಯಾಚಾರ ನಡೆದಾಗ, ಅವಳಿಗೆ ನ್ಯಾಯ ದೊರಕಿಸಲು ಸರ್ಕಾರ, ನ್ಯಾಯಾಲಯ ಎಂತಹ ಪಾತ್ರವಹಿಸಿತು ಎಂಬುದು ಇಂದು ರಹಸ್ಯವಾಗಿ ಉಳಿದಿಲ್ಲ. ಭಾಂವ್ರಿದೇವಿಗೆ ದೊರೆತ ನ್ಯಾಯವೇ ಶಕುಂತಲಾರವರಿಗೂ ದೊರಕಿದರೂ ಆಶ್ಚರ್ಯವಿಲ್ಲ. ಈ ಎರಡೂ ಅಂಶಗಳು ಮಹಿಳಾ ಚಳುವಳಿಯ ಮುಂದಿನ ಸವಾಲುಗಳನ್ನು ನೆನಪಿಸುತ್ತವೆ. ಸಾಮಾಜಿಕ ಅನಿಷ್ಟಗಳ ನಿವಾರಣೆಯ ಹಾದಿ ಎಷ್ಟೊಂದು ಕಠಿಣ, ಎಂಬುದನ್ನು ಬಯಲು ಮಾಡುತ್ತದೆ.

- ಎನ್. ಗಾಯತ್ರಿ

## ಅರಿವು

ಸಂಬಂಧ-ಕೊಡುತ್ತ ಹೋಗುವುದಲ್ಲ
ಕಟ್ಟುತ್ತ ಹೋಗುವುದು
ಕಟ್ಟುತ್ತಿರುವಾಗ ಕುಸಿಯುವುದುಂಟು
ಮತ್ತೆ ಕಟ್ಟಬಹುದು
ನಕ್ಷೆ ಗೊತ್ತಾಗದಿರಬಹುದು
ಕುಳಿತು ಯೋಚಿಸಬಹುದು
ಕಲ್ಲು ಬಿದ್ದು ಪೆಟ್ಟಾಗಬಹುದು
ಆರೈಕೆಯುಂಟು
ಎಲ್ಲ ಬಳಸಿ ಎಲ್ಲ ಸುತ್ತಿ
ಕಟ್ಟಿದ ಮನೆ
ನೂರು ವರ್ಷವಾದರೂ ಬಾಳೀತು !
ಆದರೆ,
ಕೊಡುತ್ತ ಹೋದರೆ
ಖಾಲಿಯಾಗುವುದಷ್ಟೆ !
ಕೊಡುವ ಅಮಲಿನಲ್ಲಿ
ಸಿಕ್ಕದ್ದೇನು ಗೊತ್ತಿಲ್ಲ
ಕಟ್ಟುವುದರ ತೃಪ್ತಿಯಿಲ್ಲ

ಕಾಮಧೇನು ಆಗಲಾರೆ
ದಿನದಿನವೂ ಸತ್ತು ಹುಟ್ಟುವ
ಫೀನಿಕ್ಸ್ ಪಕ್ಷಿಯಾಗುತ್ತೇನೆ.

– ಎಸ್. ಮಾಲತಿ

## ಗೂಡು

ವಿಸ್ತಾರ ಬಯಲು
ಸುಡು ಸುಡು ಬಿಸಿಲು
ಬೆಳ್ಳಂಬೆಳಗು ಬಿಳಿ
ಎಲ್ಲ ಪಾರದರ್ಶಕ
ಯಾಕೆ ಕಣೆ, ಆ ಗುಬ್ಬಿ ಗೂಡಿಗೇ
ನೇತುಕೊಂಡಿದ್ದು ?
ನಿನ್ನೆಯವರೆಗೂ ಎಷ್ಟು ಚಂದಗೆ
ಜತ್ತು ಹಿಡಿದಿತ್ತಲ್ಲ ಬದುಕಿಗೆ
ಪುಟ್ಟ ರೆಕ್ಕೆಯ ತುಂಬ
ಕಸುವೇ ಒಕ್ಕಿ ಹಾದಿತ್ತಲ್ಲ ಹೊಲ
ಎಷ್ಟು ಚಿನ್ನಾರಿ ಕನಸ ಕಂಡಿತ್ತೇ ಅದು ?
ಕಂಡ ದೇವನೂ ಕಕ್ಕಾವಿಕ್ಕಿ
ನೂರು ಕೊಕ್ಕಿನ ವರವ ಕೇಳದ್ದ ಹಕ್ಕಿ
ಹಗಲುಗನಸಲೂ ಅದೇ
'ಯಾವ ಕೊಕ್ಕಿನಲಿ ಯಾವ ಕಾಳ
ಆಯತಂದೆನು ನಾನು ಮರಿಗಳಿಗೆ.....'
ನಡು ಮಧ್ಯಾಹ್ನ ಗೂಡಲ್ಲಿ ತಲೆಯಿಟ್ಟು
ಕಾದಿದ್ದು – ಸಂಜೆ ತಂಪಿಗೆ
ಕಾಳು ತುಂಬಿದ ಕಣಜ ಹೊಕ್ಕರೂ
ಅದಕೆ ಸಿಕ್ಕಿದ್ದೇನು ? ಮಹಾ !
ನಾಲ್ಕು ಕಾಳಿಗೇ ಹೊಟ್ಟೆ ತುಂಬಿ
ಹಾರುವ ಗುಬ್ಬಿ
ಎಲ್ಲಿ ಅವಿತಿತ್ತೋ ?
ಜಡದ ಮೊಟ್ಟೆ ಹೊಟ್ಟೆಯೊಳಗೆ
ಎದೆ ಹುರುಪಳಿಸಿದ ವಾಸನೆ
ನೆತ್ತರೊಕ್ಕಿದ ಕಲೆ
ಮಾತ್ರ ಬಿಟ್ಟು ಹೋಗಿದೆಯಲ್ಲೇ,
ಯಾಕೆ ಕಣೆ ಆ ಗುಬ್ಬಿ ಗೂಡಿಗೇ
ನೇತುಕೊಂಡಿದ್ದು ?

– ಡಾ. ವಿನಯಾ

# ಮಹಿಳಾ ದೌರ್ಜನ್ಯ ಮತ್ತು ನ್ಯಾಯ ವ್ಯವಸ್ಥೆ

- ಬಿ.ಎಂ. ರೋಹಿಣಿ

ಪ್ರಾತಃಸ್ಮರಣೀಯರಾದ ಪಂಚ ಮಹಾ ಪತಿವ್ರತೆಯರ ನಾಡಿನಲ್ಲಿ, ಲಕ್ಷ್ಮಿ, ಸರಸ್ವತಿ, ದುರ್ಗೆಯರನ್ನು ಭಕ್ತಿಯಿಂದ ಆರಾಧಿಸುವ ನಾಡಿನಲ್ಲಿ ಸ್ತ್ರೀಯರ ದೌರ್ಜನ್ಯವೆಂದರೆ ವಿಚಿತ್ರ ಎನಿಸುವುದಿಲ್ಲವೇ? ಈ ವೈರುದ್ಧ್ಯವನ್ನು ಇರುವ ವಾಸ್ತವವನ್ನು ಒಪ್ಪಲೇಬೇಕಲ್ಲಾ! ನಮ್ಮ ಸಂಸ್ಕೃತಿಯಲ್ಲಿ ಹೆಣ್ಣು ಮಾತೃ ಸ್ವರೂಪಿಣಿ, ಶಕ್ತಿ ಸ್ವರೂಪಿಣಿ ಎಂದು ಗಂಟಲು ಬಿರಿಯುವಂತೆ ಸಾರುವವರು ಒಮ್ಮೆ ತಂಪು ಹೊತ್ತಿನಲ್ಲಿ ಕೂತು ಯೋಚಿಸಬೇಕು. ಅಗ್ನಿಸಾಕ್ಷಿಯಾಗಿ, ಮಂತ್ರಘೋಷದೊಂದಿಗೆ ಪಾಣಿಗ್ರಹಣ ಮಾಡಿದ ಪತ್ನಿಯನ್ನು ಪತಿಯ ಮರಣಾನಂತರ ಚಿತಾಗ್ನಿಗೆ ಮಂತ್ರ ಹೇಳುತ್ತಾ ನೂಕುವ ಸಂಪ್ರದಾಯ ಪ್ರಪಂಚದ ಬೇರಾವ ದೇಶದಲ್ಲಿದೆ.

ಹಿಂದೆ ಧರ್ಮ ಮತ್ತು ಕಾನೂನು ಹೆಣ್ಣಿಗೆ ತೀರಾ ಅನ್ಯಾಯವೆಸಗಿದೆ. ಆ ಕಾಲದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಪರಿಸ್ಥಿತಿಗಳು ಹಾಗಿದ್ದವು. ಸರಿ, ಒಪ್ಪೋಣ. ಈಗಲೂ ಅದು ಹೆಣ್ಣಿಗೆ ಶಾಪವಾಗಿ ಕಾಡಬೇಕೇ? ನಮ್ಮ ನ್ಯಾಯ ವ್ಯವಸ್ಥೆ ಸ್ತ್ರೀಯರ ದೌರ್ಜನ್ಯಗಳನ್ನು ತಡೆಯುವಲ್ಲಿ ಯಾಕೆ ವಿಫಲವಾಗಿವೆ? ಒಂದು ಸಮೀಕ್ಷೆಯಂತೆ ಭಾರತದಲ್ಲಿ ಪ್ರತಿ 54 ನಿಮಿಷಕ್ಕೆ ಒಂದು ಅತ್ಯಾಚಾರವೂ, 24 ನಿಮಿಷಕ್ಕೆ ಒಂದು ಹಿಂಸೆಯೂ, 43 ನಿಮಿಷಕ್ಕೆ ಒಂದು ಕಿಡ್ನಾಪ್ ಪ್ರಕರಣವೂ, 111 ನಿಮಿಷಕ್ಕೆ ಒಂದು ವರದಕ್ಷಿಣೆ ಸಾವೂ ನಡೆಯುತ್ತದೆ ಎಂದು ತಿಳಿದು ಬರುತ್ತದೆ. "ಸರ್ವೇ ಜನಾಃ ಸುಖಿನೋಭವಂತು" ಎಂದು ಸಾರಿದ ದೇಶದಲ್ಲಿ ಈ ಸರ್ವಜನರು ಯಾರು? ಸ್ತ್ರೀಯರು ಜನಸಂಖ್ಯೆಯ ಅರ್ಧದಷ್ಟಿದ್ದರೂ ಆ ಹಾರೈಕೆಯ ಮಾತು ಪುಸ್ತಕದ ಬದನೆಕಾಯಿಯಾಗಿ ಮಾತ್ರ ಉಳಿಯಲು ಕಾರಣವೇನು? ಅಕ್ಷರ ಸಂಸ್ಕೃತಿ ಇಲ್ಲದ ಹಿಂದಿನ ಕಾಲದ ಹೆಣ್ಣೂ, ಆಧುನಿಕ ಶಿಕ್ಷಿತ ಮಹಿಳೆಯೂ ಎದುರಿಸುವ ದೌರ್ಜನ್ಯಗಳ ಪರಿಮಾಣ ಬದಲಾಗಿಲ್ಲ. ರೂಪ ಮಾತ್ರ ಬದಲಾಗಿದೆ ಅಷ್ಟೆ. ನಮ್ಮ ದೇಶದ ಸ್ಥಿತಿ ಹೀಗಾದರೆ ಪ್ರಪಂಚದ ಇತರ ದೇಶಗಳ ಸ್ತ್ರೀಯರ ಸ್ಥಿತಿ ಇದಕ್ಕಿಂತ ತೀರಾ ಭಿನ್ನವಾಗಿಯೇನೂ ಇಲ್ಲ. ಎಲ್ಲಾ ವಿಷಯಗಳಲ್ಲೂ ಬಹಳಷ್ಟು ಪ್ರಗತಿ ಸಾಧಿಸಿರುವ ಸ್ತ್ರೀ ಪುರುಷರಿರುವ ಪಾಶ್ಚಾತ್ಯ ದೇಶಗಳಲ್ಲೂ ಹೆಂಡತಿಯರನ್ನು ಹೊಡೆಯುವ ಗಂಡಂದಿರಿದ್ದಾರೆ ಎಂದರೆ ನಂಬುವುದು ಕಷ್ಟವಾಗುತ್ತದಲ್ಲವೇ? ಆದರೆ ಇದು ವಾಸ್ತವ. ವ್ಯತ್ಯಾಸವೆಂದರೆ ಅಲ್ಲಿಯ ನ್ಯಾಯ ವ್ಯವಸ್ಥೆ ಚುರುಕಾಗಿದೆ. ಅಲ್ಲದೆ ನಮಗಿಂತ ಹೆಚ್ಚು ಕಾನೂನಿನ ಪ್ರಜ್ಞೆ ಇದೆ. ನ್ಯಾಯವನ್ನು ಪಡೆಯಲು ಅನುಸರಿಸಬೇಕಾದ ಮಾರ್ಗ ಮತ್ತು ಉಪಾಯ ತಿಳಿದಿದೆ. ನಮಗೆ ತಿಳಿದಿಲ್ಲ. ನಮ್ಮಲ್ಲಿರುವ ಕೊರತೆ ಇದೇ ಆಗಿದೆ.

ದೌರ್ಜನ್ಯಗಳು ಕುಟುಂಬದ ಪರಿಧಿಯೊಳಗೆ ಕೌಟುಂಬಿಕವಾಗಿಯೂ ಇರಬಹುದು. ಸ್ತ್ರೀ ಸಮೂಹಕ್ಕೆ ಸಂಬಂಧಿಸಿ ಸಾಮೂಹಿಕವಾಗಿಯೂ ಇರಬಹುದು. ಸ್ತ್ರೀಯರ ಮೇಲೆ ಆಗುವ ಎಲ್ಲಾ ದೌರ್ಜನ್ಯಗಳು ಕ್ರಿಮಿನಲ್ ದಂಡಸಂಹಿತೆಯ ವ್ಯಾಪ್ತಿಯಲ್ಲಿ ಬರುತ್ತದೆ. ಅತ್ಯಾಚಾರ, ವಿಷಮ ದಾಂಪತ್ಯ, ವಧೂ ದಹನ ಮತ್ತು ಬಹುಪತ್ನಿತ್ವಗಳು ಹೆಣ್ಣನ್ನು ಸದಾ ಕಾಡುವ ಸಮಸ್ಯೆಗಳು. ಇವುಗಳಲ್ಲಿ ಪತಿ-ಪತ್ನಿಯರ ಕೆಟ್ಟ ಸಂಬಂಧ ಮತ್ತು ವಧೂ ದಹನಗಳೇ ಹೆಚ್ಚು. ಹೆಚ್ಚಿನ ಸಾವುಗಳೆಲ್ಲಾ ಆಕಸ್ಮಿಕ ಸಾವುಗಳೆಂದೇ ಪರಿಗಣಿಸಲ್ಪಡುತ್ತವೆ. ಈ ಸಾವುಗಳು ಬೆಳಕಿಗೆ ಬರುವುದೇ ಇಲ್ಲ, ಬೆಳಕಿಗೆ ಬಂದರೂ ಕೋರ್ಟಿನವರೆಗೆ ತಲುಪುವುದೇ ಇಲ್ಲ, ತಲುಪಿದರೂ ಅಪರಾಧಿಗೆ ಶಿಕ್ಷೆ ಆಗುವುದಿಲ್ಲ. ನ್ಯಾಯದಾನಕ್ಕೆ ನ್ಯಾಯಾಲಯವು ಹಲವು ನಿಯಮಗಳನ್ನು ಮತ್ತು ಕ್ರಮಗಳನ್ನು ಬಯಸುತ್ತದೆ. ಬಲವಾದ ಸಾಕ್ಷಿಗಳನ್ನು ನಿರೀಕ್ಷಿಸುತ್ತದೆ. ಆದುದರಿಂದ ದೌರ್ಜನ್ಯಕ್ಕೊಳಗಾದವರು ನಿರಾಶೆ ಹೊಂದುವುದೇ ಜಾಸ್ತಿ. ಆದರೆ ನಿಜ ಸಂಗತಿ ಏನೆಂದರೆ ಸಾಕ್ಷಿಗಳು ಇಲ್ಲ ಎಂಬ ಹಿಂಜರಿಕೆಗಿಂತ, ಸಾಕ್ಷಿಗಳನ್ನು ಹೇಗೆ ಉಪಯೋಗಿಸಿಕೊಳ್ಳುತ್ತೇವೆ ಎಂಬುದೇ ನ್ಯಾಯದಾನದಲ್ಲಿ ಮುಖ್ಯವಾಗುತ್ತದೆ.

ಫಿರ್ಯಾದಿದಾರನಿಗೆ ಈ ಮೂಲಭೂತವಾದಿ ಕ್ರಮ ನಿಯಮಗಳ ತಿಳುವಳಿಕೆ ಇಲ್ಲದೆ, ಸರಿಯಾದ ಮಾರ್ಗದರ್ಶನವಿಲ್ಲದೆ ಅಪರಾಧಿಯು ಹೇಗೆ ಶಿಕ್ಷೆಯಿಂದ ವಂಚಿತನಾಗುತ್ತಾನೆ ಎಂಬುದಕ್ಕೆ ಬೆಳಗಾಂನ ಸೆಶನ್ಸ್ ಜಡ್ಜ್ ಕೋರ್ಟಿನಲ್ಲಿ ನಡೆದ ವಧೂ ದಹನ ದೌರ್ಜನ್ಯದ ವಿಚಾರಣೆಯ ಸಂಕ್ಷಿಪ್ತ ವಿವರ ಈ ರೀತಿ ಇದೆ.

ಜಮಖಂಡಿಯ ಮಹಮದ್ ಹಸನ್ ಸಾಬ್ ಎಂಬವರ ಮಗಳು ಮಮ್ತಾಜ್‌ಳನ್ನು ಚಿಕ್ಕೋಡಿಯ ಮಹಮದ್ ಸಾಬ್ ನದಾಫ್ ಇವರ ಮಗ ನಿಸಾರ್‌ಗೆ ಮದುವೆ ಮಾಡಿಕೊಟ್ಟಿದ್ದರು. ಏಳು ವರ್ಷಗಳ ದಾಂಪತ್ಯದ ಬಳಿಕ ಒಂದು ದಿನ 9.3.94 ರಂದು ರಮ್ಜಾನ್ ಹಬ್ಬದ ಸಮಯದಲ್ಲಿ ತವರು ಮನೆಯಿಂದ ಹಣ ತರಬೇಕೆಂದು ಪತ್ನಿಯನ್ನು ಪೀಡಿಸಿದ. ತವರು ಮನೆಯ ಕಷ್ಟವನ್ನು ಮಮ್ತಾಜ್ ವಿವರಿಸಿ ಹೇಳಿದರೂ ಕೇಳದೆ, ಜಗಳಾಡಿ, ಸಂಜೆ ಸುಮಾರು 5 ಗಂಟೆಯ ಹೊತ್ತಿಗೆ ಪತ್ನಿಗೆ ಸೀಮೆ ಎಣ್ಣೆ ಸುರಿದು ಬೆಂಕಿ ಕೊಟ್ಟ. ಮರುದಿನ ನಿಸಾರ್‌ನ ತಮ್ಮ ಮಮ್ತಾಜ್‌ನ ತವರು ಮನೆಗೆ ಈ ಸುದ್ದಿ ಮುಟ್ಟಿಸಿದ. ಇದನ್ನು ತಿಳಿದು ಧಾವಿಸಿ ಬಂದ ತಂದೆ ಮಗಳ ದುಸ್ಥಿತಿಗೆ ಮರುಗಿ ಅವಳನ್ನು ತಮ್ಮೊಂದಿಗೆ ಕಳಿಸಿಕೊಡಬೇಕೆಂದೂ ಕೇಳಿಕೊಂಡ. ಆದರೆ ಗಂಡನ ಮನೆಯವರು ಒಪ್ಪದ ಕಾರಣ 16.3.94 ರಂದು ಕೋರ್ಟ್ ವಾರಂಟ್ ತಂದು ಮಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಜಮಖಂಡಿಯ ಚೇದದಾಳನಲ್ಲಿರುವ ಸರಕಾರಿ ಆಸ್ಪತ್ರೆಗೆ ದಾಖಲೆ ಮಾಡಿಸಿ ಶುಶ್ರೂಷೆ ಕೊಡಿಸಿದ. ಕೋರ್ಟ್ ವಾರಂಟ್ ತೆಗೆಸಿಕೊಟ್ಟ ವಕೀಲರೂ ಕೂಡಾ ಫಿರ್ಯಾದಿದಾರ ಮಹಮದ್ ಹಸನ್ ಸಾಬ್ ಅವರಿಗೆ ಸರಿಯಾದ ಮಾರ್ಗದರ್ಶನ ಮಾಡಲಿಲ್ಲ.

ಸಾವು ಬದುಕಿನ ಮಧ್ಯೆ ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿದ್ದ ಮಗಳನ್ನು ಕಂಡು ನೊಂದು ತಂದೆ ಅನ್ಯಾಯದ ವಿರುದ್ಧ ಪ್ರತಿಭಟಿಸಿದರು.

19.3.94 ರಂದು ಬೆಳಗಾಂನ ಸುಪರಿಂಟೆಂಡ್ ಪೋಲೀಸ್ ಇವರಿಗೆ ಮಮ್ತಾಜ್‌ಳ ಹೇಳಿಕೆಯನ್ನು ವಿವರಗಳ ಸಹಿತ ಒಂದು ಫಿರ್ಯಾದಿಯನ್ನು ರಿಜಿಸ್ಟರ್ಡ್ ಅಂಚೆಯಲ್ಲಿ ಸ್ವೀಕೃತಿ ಪತ್ರದ ಸಹಿತ ಕಳಿಸಿದರು. ಇದರಲ್ಲಿ ಆಗಿರುವ ದೋಷವೇನೆಂದರೆ ಮಮ್ತಾಜ್‌ಳ ಸಹಿ ಇರಲಿಲ್ಲ, ಸಾಕ್ಷಿದಾರರ ಹೆಸರು ಸಹಿ ಇರಲಿಲ್ಲ. ಆರಕ್ಷಕ ಇಲಾಖೆಯ ನಿರ್ಲಕ್ಷ್ಯದಿಂದ ಆ ಫಿರ್ಯಾದಿ 'ಫ್ರೀಜರ್'ನಲ್ಲಿ ಇಡಲ್ಪಟ್ಟಿತು. 21.3.94 ರಂದು ತಲುಪಿದ ಪತ್ರ ನಾಲ್ಕು ದಿನಗಳ ವಿಶ್ರಾಂತಿಯ ಬಳಿಕ ಮೆಲ್ಲನೆ ಹೊರಬಂದು ಸದಲ್ಗಾ ಪೋಲೀಸ್ ಸ್ಟೇಶನಿಗೆ ವಿಚಾರಣೆಗಾಗಿ ಕಳುಹಿಸಲಾಯಿತು. ಈ ಮಧ್ಯೆ ದಾರುಣ ಸ್ಥಿತಿಯಲ್ಲಿದ್ದ ಮಮ್ತಾಜ್ 30.5.94 ರಂದು ಆಸ್ಪತ್ರೆಯಲ್ಲೇ ತೀರಿಕೊಂಡಳು. ಪೋಲೀಸ್ ಇಲಾಖೆಗೆ ದೂರು ನೀಡಿ 11 ದಿನಗಳಾದರೂ ಕೇಸು ದಾಖಲಿಸದ್ದನ್ನು ಕಂಡು ತಂದೆ ಮತ್ತೊಮ್ಮೆ ಎಚ್ಚರಿಕೆಗಾಗಿ ಫಿರ್ಯಾದಿ ಕೊಡಬೇಕಾಯಿತು. ಸದಲ್ಗಾ ಪೋಲೀಸ್ ಸ್ಟೇಶನ್‌ರವರು ತಮಗೆ ಫಿರ್ಯಾದಿ ತಲುಪಿದ್ದೇ 30.4.94 ರಂದು ಎಂದು ವಾದಿಸಿದರು. ಆ ನಂತರ ಅಪರಾಧಿ ನಿಸಾರ್‌ನನ್ನು ಸರ್ಚ್ ವಾರಂಟ್ ಕಳುಹಿಸಿ ಬಂಧಿಸಿ ವಿಚಾರಣೆಯೇನೋ ಪ್ರಾರಂಭವಾಯಿತು. ಆದರೆ ಆಗಲೇ ನ್ಯಾಯ ಸೋರಿ ಹೋಗಲು ವ್ಯವಸ್ಥೆಯಲ್ಲಿ ಬೇಕಾದಷ್ಟು ತೂತುಗಳು ಕೊರೆಯಲ್ಪಟ್ಟಿದ್ದವು.

ಸರಕಾರಿ ಆಸ್ಪತ್ರೆಯಲ್ಲಿ ಮಮ್ತಾಜ್‌ಗೆ ಶುಸ್ರೂಷೆ ಮಾಡಿದ ಡಾಕ್ಟರ್ ಕೂಡಾ ತನ್ನ ವೃತ್ತಿಧರ್ಮಕ್ಕೆ ವಿರುದ್ಧವಾದ ಹೇಳಿಕೆಯನ್ನು ಕೊಟ್ಟರು. ಕೋರ್ಟ್ ವಾರಂಟ್‌ನ ಮೂಲಕ ಬಂದ ರೋಗಿಯೆಂದು ಮಾತ್ರ ಶುಶ್ರೂಷೆ ಮಾಡಿದೆನೆಂದೂ, ಸುಟ್ಟಗಾಯಗಳು ಹೇಗೆ ಆದವು ಎಂಬುದನ್ನು ತಾನು ಅವಳು ಬದುಕಿರುವಾಗ ಕೇಳಿಲ್ಲವೆಂದೂ ತಿಳಿಸಿದರು. ಡಾಕ್ಟರೂ ಕೂಡಾ ಅಪರಾಧಿಗೆ ಶಿಕ್ಷೆ ತಪ್ಪಿಸುವಲ್ಲಿ ಈ ರೀತಿಯ ಸಾಕ್ಷಿಯಿಂದ ನೆರವಾದರು. ಮಮ್ತಾಜ್ ಆಸ್ಪತ್ರೆಗೆ ದಾಖಲಾದ ಕೂಡಲೇ ಅವರು ಪೋಲೀಸರ ಸಮ್ಮುಖದಲ್ಲಿ ಅವಳಿಂದ ವಾಗ್ಮೂಲಗಳನ್ನು ದಾಖಲಿಸಿ ಕೇಸು ದಾಖಲಿಸಬೇಕಿತ್ತು. ಹಾಗೆ ಮಾಡದೆ ಕರ್ತವ್ಯಲೋಪ ಮಾಡಿದ್ದರಿಂದ ಕಾನೂನನ್ನು ತಡೆ ಹಿಡಿದು ಅಪರಾಧಿ ಜಾರುವಂತಾಯಿತು.

'ಕೆಂಪು ಪಟ್ಟಿಯ' ಹಾವಳಿ, ಜವಾಬ್ದಾರಿಯ ಕೊರತೆ ಓರ್ವ ಹೆಣ್ಣಿನ ಬದುಕನ್ನು ಹೇಗೆ ನಿರ್ಲಕ್ಷ್ಯದಿಂದ ತುಳಿಯಿತು ಎಂದು ಇದರಿಂದ ತಿಳಿಯುತ್ತದೆ. ಕೋರ್ಟ್ ವಾರಂಟ್ ಕೊಡಿಸಿದ ವಕೀಲರೇ ಪ್ರಾರಂಭದಲ್ಲಿ ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ ಮಮ್ತಾಜ್ ಬದುಕಿರುವಾಗಲೇ ವಾಗ್ಮೂಲ ಬರೆಸಿಕೊಡುತ್ತಿದ್ದರೆ ಅವಳು ಕಣ್ಮುಚ್ಚುವ ಮೊದಲೇ ನ್ಯಾಯದಾನದ ಪ್ರಕ್ರಿಯೆ ಚುರುಕಾಗಿ ನಡೆಯುತ್ತಿತ್ತು. ಡಾಕ್ಟರಾದರೂ ಕೇಸ್ ಹಿಸ್ಟರಿ ಬರೆಯುವಾಗ ಸರಿಯಾದ ಕ್ರಮಗಳನ್ನು ಅನುಸರಿಸಬೇಕಿತ್ತು. ಮಗಳನ್ನು ಕಳೆದುಕೊಂಡ ಮುಗ್ಧ ತಂದೆಗೆ ಕೊನೆಗೂ ನ್ಯಾಯ ಸಿಗಲಿಲ್ಲ. ಡಾಕ್ಟರರ ನಿರ್ಲಕ್ಷ್ಯಕ್ಕಾಗಿ ತೀರ್ಪಿನ ಪ್ರತಿಯನ್ನು ಸೆಶನ್ಸ್ ನ್ಯಾಯಾಧೀಶರು ಇಂಡಿಯನ್ ಮೆಡಿಕಲ್ ಎಸೋಸಿಯೇಶನ್‌ಗೆ ಕಳಿಸಿ, ಅವರ ವಿರುದ್ಧ ವಿಚಾರಣೆಯಾಗಬೇಕೆಂದು ಆದೇಶಿಸಿದರು.

ದೌರ್ಜನ್ಯಗಳು ಹೆಚ್ಚಲು ನಮ್ಮ ನ್ಯಾಯ ಸಂಹಿತೆ ಮಾತ್ರ ಕಾರಣವಲ್ಲ. ಅಪರಾಧಿಗಳಿಗೆ ಶಿಕ್ಷೆಯಾಗದಿರಲು ಯಾರ್‍ಯಾರು ಹೇಗೆ ಕಾರಣರಾಗುತ್ತಾರೆ ಎಂಬುದನ್ನು ಈ ಕೇಸಿನಿಂದ ತಿಳಿಯಬಹುದು.

ಪತಿ-ಪತ್ನಿಯ ಮೇಲೆ ನಡೆಸುವ ಲೈಂಗಿಕ ದೌರ್ಜನ್ಯ ಮತ್ತೊಂದು ರೀತಿಯದು. ಪತ್ನಿಯ ಸಮ್ಮತಿ ಇಲ್ಲದೆ ಸಂಭೋಗ ನಡೆಸುವುದು ಅತ್ಯಾಚಾರವಾಗುತ್ತದೆ. ಪಶುವಿನಂತೆ ಪ್ರತಿದಿನ ಮೇಲೆರಗುವ ಕ್ರೌರ್ಯಕ್ಕೆ ಸಾಕ್ಷಿ ಹೇಳಲು ಸಾಧ್ಯವೇ? ಬೆಡ್‌ರೂಂನ ಈ ಕಲಹವನ್ನು ಬಹಿರಂಗಗೊಳಿಸುವುದು ಯಾರಿಗೂ ಸಾಧ್ಯವಾಗದು. ಒಂದು ವೇಳೆ ಇಂತಹ ದೌರ್ಜನ್ಯದ ವಿರುದ್ಧ ಪ್ರತಿಭಟಿಸುವ ಧೈರ್ಯ ತೋರಿದವರಿಗೆ ಕಾನೂನು ಹೇಗೆ ರಕ್ಷಣೆ ಕೊಡುತ್ತದೆ? ಮುಚ್ಚಿದ ಕೊಠಡಿಯಲ್ಲಿ ವಿಚಾರಣೇ ನಡೆಸುವುದನ್ನು ಬಿಟ್ಟರೆ ಬೇರೇನೂ ಮಾಡಲು ಸಾಧ್ಯವಿಲ್ಲ. ಕೊನೆಗೆ ವಿಚ್ಛೇದನದಲ್ಲಿ ಮುಕ್ತಾಯ. ಇದು ಕಾನೂನಿನ ಮಿತಿಯೂ ಹೌದು.

ಭೋಗಕ್ಕಾಗಿಯೇ ಕೊಂಡು ತಂದ ವಸ್ತು ಎಂದು ಭಾವಿಸಿ ಪತಿ-ಪತ್ನಿಯ ಮೇಲೆ ಲೈಂಗಿಕ ಅತ್ಯಾಚಾರವೆಸಗಿದರೆ? 'ಹರ ಕೊಲ್ಲಲ್ ಪರ ಕಾಯ್ವನೇ?' ಆದರೆ ಕಾಯದಿದ್ದರೂ ಶಿಕ್ಷೆ ಕೊಡಿಸಬಹುದು. ನಮ್ಮ ಊರಲ್ಲೇ ತಂದೆಯೊಬ್ಬ ಮಗಳನ್ನು ಆಗಾಗ ಬಲಾತ್ಕಾರ ಮಾಡುತ್ತಿದ್ದ. ತಾಯಿ ಇಲ್ಲದ ಅವಳು ಈ ಹಿಂಸೆಯನ್ನು ಯಾರಲ್ಲಿ ಹೇಳುವುದು? ಕೊನೆಗೆ ಬಸಿರೂ ಬಂದ ಮೇಲೆ ತಂದೆ ಅದನ್ನು ತೆಗೆಸಲು ಆಸ್ಪತ್ರೆಗೆ ಕೊಂಡೊಯ್ದ. ಅಲ್ಲಿಯ ಮಹಿಳಾ ವೈದ್ಯೆ ಅವಳಲ್ಲಿ ಅನುನಯದಿಂದ ಪ್ರಶ್ನಿಸಿದಾಗ ಸತ್ಯ ಸಂಗತಿ ಹೇಳಿದಳು. ದಿಗ್ಭ್ರಮೆಗೊಂಡ ವೈದ್ಯೆ ತಂದೆಯ ವಿರುದ್ಧ ಕೇಸು ದಾಖಲು ಮಾಡಿದಳು. ವೈದ್ಯೆ ಅನುಸರಿಸಿದ ದಾರಿ ಕ್ರಮಬದ್ಧ ಮತ್ತು ನೇರವಾದುದರಿಂದ ಅಪರಾಧಿಗೆ ಶಿಕ್ಷೆಯಾಯಿತು.

ಅತ್ಯಾಚಾರದ ಬಹುತೇಕ ಪ್ರಕರಣಗಳಲ್ಲಿ ದೇಶಾದ್ಯಂತ ಯಾರಿಗೂ ಶಿಕ್ಷೆ ಆಗಿಲ್ಲ. ಅತ್ಯಾಚಾರಕ್ಕೊಳಗಾದ ಹೆಣ್ಣು ಕೂಡಲೇ ವೈದ್ಯರನ್ನು ಕಾಣಲು ಅಸಾಧ್ಯವಾದುದರಿಂದ ಸಾಕ್ಷಿಗಳಿದ್ದರೂ ಅಪರಾಧಿಗಳಿಗೆ ಶಿಕ್ಷೆ ತಪ್ಪುತ್ತದೆ. ಮಥುರಾ ಪ್ರಕರಣದಲ್ಲಿ ಹೈಕೋರ್ಟಿನಲ್ಲಿ ಶಿಕ್ಷೆಯಾದರೂ ಸುಪ್ರೀಂಕೋರ್ಟಿನಲ್ಲಿ ಬಿಟ್ಟುಹೋಯಿತು. ''ಹೆಣ್ಣಿರುವುದೇ ಭೋಗಕ್ಕಲ್ಲವೇ? ಹೆಂಗಸರು ಬೀದಿಗಿಳಿದು ಅರಚಿದ ಮಾತ್ರಕ್ಕೆ ತಪ್ಪಿತಸ್ಥರನ್ನು ಶಿಕ್ಷಿಸಲು ಸಾಧ್ಯವಿಲ್ಲ'' ಎಂದು ಸಾರುವ ಧುರೀಣರಿರುವ ಈ ನಾಡಿನಲ್ಲಿ ನ್ಯಾಯವನ್ನು ತಿರುಚುವುದು ಕಷ್ಟವಲ್ಲ. ಅತ್ಯಾಚಾರ ಪ್ರಕರಣಗಳು ಬಹಳ ಸೂಕ್ಷ್ಮವಾದ ಒಳ ಸುಳಿಗಳನ್ನೊಳಗೊಂಡಿವೆ. ಇದರಿಂದ ಹೊರಬರುವುದು ಶಿಕ್ಷಿತೆಗಾಗಲೀ ಅಶಿಕ್ಷಿತೆಗಾಗಲೀ ಈ ನಾಡಿನಲ್ಲಿ ಕಷ್ಟವೇ ಸರಿ.

ಅತ್ಯಾಚಾರವು ಕೇವಲ ಸಂಭೋಗಕ್ಕೆ ಮಾತ್ರ ಸೀಮಿತವಾಗಿರದೆ, ಅನೇಕ ಬಗೆಯ ಒಪ್ಪಿಗೆ ಇಲ್ಲದ ಲೈಂಗಿಯ ಹಲ್ಲೆಯ ಅಪರಾಧವನ್ನೂ, ಲೈಂಗಿಕ ಕಿರುಕುಳವನ್ನೂ ಒಳಗೊಂಡಿದೆ. ಏಷ್ಯಾ ಹಾಗೂ ಕಾಮನ್‌ವೆಲ್ತ್‌ನಲ್ಲಿರುವ ಹಲವಾರು ರಾಷ್ಟ್ರಗಳಲ್ಲಿ ಈಗಾಗಲೇ ನ್ಯಾಯ ವ್ಯವಸ್ಥೆಯಲ್ಲಿ ತಿದ್ದುಪಡಿ ಮಾಡಲಾಗಿದೆ. ನಮ್ಮ ನ್ಯಾಯ ವ್ಯವಸ್ಥೆಯಲ್ಲೂ ಬದಲಾವಣೆಯಾದೀತೆಂದು ನಿರೀಕ್ಷಿಸುತ್ತೇವೆ. ಲೈಂಗಿಕ ಕಿರುಕುಳದ ಒಂದು ವಿಕೃತ ರೂಪದ ಕೇಸು ಈ ರೀತಿ ಇದೆ. ಮೈಸೂರಿನ ಮಾಗಡಿ

ರೋಡಲ್ಲಿ ವಾಸಿಸುತ್ತಿದ್ದ ನವದಂಪತಿಗಳಲ್ಲಿ ನಡೆದ ಘಟನೆ. ಗಂಡನು ಯಾವಾಗಲೂ ಹೆಂಡತಿಯ ಬಗ್ಗೆ ದೂರುತ್ತಿದ್ದ. ತನಗೆ ಆಕೆ ಲೈಂಗಿಕವಾಗಿ ಸಹಕಾರ ಕೊಡುವುದಿಲ್ಲ, ಅವಳಿಗೆ ಆಸಕ್ತಿ ಇಲ್ಲ ಇತ್ಯಾದಿ ಅವನ ಆಕ್ಷೇಪಗಳು. ತಾಯಿ ಮನೆಯವರು ಬುದ್ಧಿ ಹೇಳಿ ಮಗಳನ್ನು ಗಂಡನ ಬಳಿ ಬಿಡುವುದು, ಅವಳು ಒಂದೆರಡು ದಿನಗಳಲ್ಲಿ ಹಿಂದೆ ಓಡಿ ಬರುವುದು ಹೀಗೆ ನಡೆಯುತ್ತಿತ್ತು. ಕೊನೆಗೆ ನಿರ್ವಾಹವಿಲ್ಲದೆ ತಾಯಿಯೊಡನೆ ಮಗಳು ನಿಜ ಸಂಗತಿ ಹೇಳಿ ಅತ್ತುಬಿಟ್ಟಳು. ಗಂಡ ಪ್ರತಿರಾತ್ರಿ ಬಾಯಿಯಲ್ಲಿ ಸಂಭೋಗ ಮಾಡುತ್ತೇನೆಂದು ಅವಳಿಗೆ ಭಯಂಕರ ಅಸಹ್ಯ ವಾಂತಿಯಾಗುತದೆಂದೂ ತಿಳಿಸಿದಳು. ತಾಯಿ ಪೋಲೀಸ್ ಕಂಪ್ಲೈಂಟ್ ಕೊಟ್ಟರು. ಕೂಡಲೇ ಗಂಡನ ಮನೆಯವರು 'ಗಂಡನಿಗೆ ಲೈಂಗಿಕ ಸುಖ ಕೊಡಲಿಕ್ಕೆ ಸಾಧ್ಯವಾಗದುದರಿಂದ ಗಂಡ ಯಾರನ್ನು ಬೇಕಾದರೂ ಮದುವೆಯಾಗಬಹುದು. ಅವರ ಆಸ್ತಿಗೂ ನನಗೂ ಯಾವ ಸಂಬಂಧವೂ ಇಲ್ಲ'' ಎಂದು ಅಗ್ರಿಮೆಂಟು ಬರೆಯಿಸಿ ಹೆಂಡತಿಯಿಂದ ದಸ್ಕತ್ತು ಹಾಕಿಸಿದರು. ಇಷ್ಟಕ್ಕೇ ತೃಪ್ತನಾಗದ ಗಂಡ ಅವಳೂ ಸುಖವಾಗಿರಬಾರದು ಎಂದು ಚಾಕುವಿನಿಂದ ಇರಿದ. ಹೆಂಡತಿ ಬದುಕಿದಳು. ವಿಚಾರಣೆಯಲ್ಲಿ ಗಂಡನಿಗೆ ಶಿಕ್ಷೆಯಾದರೂ ಅದು ಲೈಂಗಿಕ ಹಲ್ಲೆಗಲ್ಲ, ದೈಹಿಕ ಹಲ್ಲೆಗೆ. ಯಾಕೆಂದರೆ ನಾಲ್ಕು ಗೋಡೆಯ ಮಧ್ಯೆ ನಡೆಯುವ ಹಿಂಸೆಯನ್ನು ಯಾರು ಹೇಳುತ್ತಾರೆ? ಬೆಳಕಿಗೆ ಬಾರದ ಇಂತಹ ಎಷ್ಟು ದೌರ್ಜನ್ಯಗಳಿವೆಯೋ ಬಲ್ಲವರಾರು? ಸಿಗರೇಟಿನ ಬೆಂಕಿಯನ್ನು ಮೈ ಮೇಲಿಟ್ಟು ಆನಂದಿಸುವ ಗಂಡಂದಿರೆಷ್ಟಿಲ್ಲ? ಕುಡಿದು ಬಂದು ಪಶುಗಳಿಗೆ ಬಡಿದಂತೆ ಬಡಿಯುವ, ಒದೆಯುವ, ಮನೆಯಿಂದ ಹೊರದಬ್ಬುವ ಗಂಡಂದಿರಿಗೆ ನಮ್ಮ ನ್ಯಾಯ ವ್ಯವಸ್ಥೆಯಲ್ಲಿ ಯಾವ ಶಿಕ್ಷೆಯೂ ಇಲ್ಲ. ''ಗಂಡ ಹೆಂಡಿರ ಜಗಳ ಉಂಡು ಮಲಗುವವರೆಗೆ'' ಎಂಬ ಗಾದೆ ಮಾತು ಹೇಳಿ ಹಗುರವಾಗಿ ಕಾಣುವವರೇ ಜಾಸ್ತಿ. ಯಾಕೆಂದರೆ ಗಂಡ ಹೆಂಡಿರ ಮಧ್ಯೆ ಇರುವ ಭಾವನಾತ್ಮಕ ಸಂಬಂಧ ಮತ್ತು ಅದಕ್ಕಿರುವ ಧಾರ್ಮಿಕ ಮತ್ತು ಸಾಮಾಜಿಕ ಆವರಣ ಹೆಣ್ಣಿನ ಆಕ್ರೋಶದ ಗಂಟಲನ್ನು ಒತ್ತಿ ಹಿಡಿಯುತ್ತದೆ.

ಲೈಂಗಿಕ ಕಿರುಕುಳವನ್ನು ವಿರೋಧಿಸಿದ ಉದ್ಯೋಗಸ್ಥೆ ಹೆಣ್ಣೊಬ್ಬಳನ್ನು ಅವಳ ಬಾಸ್ 12 ಗಂಟೆಯವರೆಗೂ ಮನೆಗೆ ಹೋಗಲು ಬಿಡಲಿಲ್ಲ. ಹೋಟೆಲಿಗೆ ಬಾ ಎಂದಾಗ ಆಕೆ ನಿರಾಕರಿಸಿದಳು. ಅದರಿಂದಾಗಿ ಆಕೆಯ ಕೆಲಸ ಹೋಯಿತು. ಆಕೆ ರಾಷ್ಟ್ರೀಯ ಮಹಿಳಾ ಕಮಿಷನಿನ ಮೊರೆ ಹೋದಳು. ಏನು ಮಾಡಿದರೇನು ತಪ್ಪಿತಸ್ಥ ಬಾಸ್‌ಗೆ ಕಾನೂನಿಲ್ಲಿ ಶಿಕ್ಷೆ ಕೊಡುವಂತಿರಲಿಲ್ಲ. ಉದ್ಯೋಗಸ್ಥ ಮಹಿಳೆಯರಿಗೆ ಕಛೇರಿಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ನಿತ್ಯವೂ ಇಂತಹ ದೌರ್ಜನ್ಯಗಳು ನಡೆಯುತ್ತಿರುತ್ತವೆ. ಅಲ್ಲಲ್ಲಿ ಆ ಬಗ್ಗೆ ಪ್ರತಿಭಟನೆಗಳೂ ಆಗುತಿವೆ. ಅಧಿಕಾರ ಹಣವಿರುವವರು, ಅದರ ಮದ ನೆತ್ತಿಗೇರಿದವರು ಲೋಕದಲ್ಲಿರುವ ಹೆಣ್ಣುಗಳೆಲ್ಲಾ ತಮ್ಮ ಭೋಗಕ್ಕೆ ಒದಗುವವರು ಎಂದು ಭಾವಿಸುತ್ತಾರೆ. ಒರಿಸ್ಸಾದ ಬಸಂತಿ ಬರಾ ಎಂಬ ಮಹಿಳೆ ಒಂದು ಪ್ರಾದೇಶಿಕ ಸಮಿತಿಯ ಅಧ್ಯಕ್ಷೆಯಾಗಿದ್ದಳು. ಒರಿಸ್ಸಾದ ಮಂತ್ರಿ ದಾಮೋದರ್ ರಾವುತ್ ಅವಳ ಸ್ತನವನ್ನು ಮುಟ್ಟುವ ದಾರ್ಷ್ಟ್ಯ ತೋರಿದ್ದು ಆಕೆ ಪ್ರತಿಭಟಿಸಿ ಕೇಸು ದಾಖಲಿಸಿದ್ದು ದೊಡ್ಡ ಸುದ್ದಿಯಾಗಿತ್ತು. ಅದೇ ರೀತಿ ಬಿಹಾರಿನ ಮೆಡಿಕಲ್ ಸಾಯನ್ಸ್‌ನ ಪ್ರಾಧ್ಯಾಪಿಕೆ ಡಾ. ಜಯಮಾಲಾ ಕಮಲ್ ಅವರಿಗೆ ಅಲ್ಲಿಯ ಆರೋಗ್ಯ ಮಂತ್ರಿಯಾಗಿದ್ದ ಮಹಾಬೀರ್ ಪ್ರಸಾದ್ ಜನರ ಮುಂದೆಯೇ ಅಶ್ಲೀಲ ಮಾತಾಡಿದ್ದು ಕೂಡಾ ದೊಡ್ಡ ಪ್ರಕರಣವಾಗಿತ್ತು. ಭಾರತೀಯ ವೈದ್ಯಕೀಯ ಸಂಘವು ಆರೋಗ್ಯ ಮಂತ್ರಿಯ ಮೇಲೆ ಕೇಸು ದಾಖಲಿಸಿತ್ತು. ನಮ್ಮ ಕಾನೂನು ವ್ಯವಸ್ಥೆಯ ಮಹತ್ತರವಾದ ದೋಷವೆಂದರೆ ನ್ಯಾಯದಾನದಲ್ಲಿ ಉಂಟಾಗುವ ವಿಳಂಬ. ತಾಯಿಗಾದ ಅನ್ಯಾಯಕ್ಕೆ ಮಗಳ ಕಾಲದಲ್ಲಿ ಶಿಕ್ಷೆಯಾಗಿ ಫಲವೇನು?

ಈ ರೀತಿಯ ಲೈಂಗಿಕ ಹಿಂಸೆ ತನಗಿಂತ ಹಿರಿಯ ಅಧಿಕಾರಿಗಳಿಂದ ಮಾತ್ರ ಹೆಣ್ಣು ಅನುಭವಿಸುತ್ತಾಳೆ ಎಂದು ತಿಳಿದರೆ ತಪ್ಪು. ಕಿರಿಯ ಅಧಿಕಾರಿಗಳಿಂದಲೂ ಈ ರೀತಿಯ ಕಿರುಕುಳ ಉಂಟಾಗುತ್ತದೆ ಎಂಬುದಕ್ಕೆ ಬಜಾಜ್ ಮತ್ತು ಗಿಲ್ ಪ್ರಕರಣವೇ ಸಾಕ್ಷಿ. 1988ರಲ್ಲಿ ಔತಣಕೂಟವೊಂದರಲ್ಲಿ ಕೆ.ಪಿ.ಎಸ್. ಗಿಲ್, ತನಗಿಂತ ಹಿರಿಯ ಅಧಿಕಾರಿ ಐ.ಎ.ಎಸ್. ರೂಪನ್ ಬಜಾಜ್ ಅವರೊಂದಿಗೆ ಅಸಭ್ಯವಾಗಿ ವರ್ತಿಸಿದರು. ಅವರ ಪತಿಯು ಎದುರಿಗೇ ಇದ್ದರೂ ಆಕೆಯ ನಿತಂಬಕ್ಕೆ ತಟ್ಟಿದರು. ಅಲ್ಲಿದ್ದ ಆಹ್ವಾನಿತರು ಈ ಘಟನೆಗೆ ಸಾಕ್ಷಿಗಳಾಗಿದ್ದರು. ಪ್ರತಿಸಲವೂ ಕುಡಿದು ಹೆಂಗಸರೊಡನೆ ಅಸಭ್ಯವಾಗಿ ವರ್ತಿಸುವುದು ಗಿಲ್ ಅವರಿಗೆ ರೂಢಿಯಾಗಿತ್ತು. ಪಂಜಾಬಿನ ಭಯೋತ್ಪಾದನೆಯನ್ನು ಸದೆಬಡಿದ ಅವರನ್ನು ಪ್ರಶ್ನಿಸುವ ಧೈರ್ಯ ಯಾರಿಗೂ ಇರಲಿಲ್ಲ. ರೂಪನ್ ಕೂಡಲೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡರೂ ಯಾರು ಸ್ಪಂದಿಸಲಿಲ್ಲ. ರೂಪನ್ ಗಿಲ್ ವಿರುದ್ಧ ಕೇಸ್ ಫೈಲ್ ಮಾಡಿದರು. ಈ ಕೇಸು ಸಾಕಷ್ಟು ವಾದ ವಿವಾದಗಳಿಗೆ ಎಡೆ ಮಾಡಿತು. ಮಹಿಳೆಯರೂ ಕೂಡಾ ''ಏನು ಒಂದಿಷ್ಟು ನಿತಂಬ ಸವರಿದ್ದು ಮಹಾ'' ಎಂಬ ರೀತಿಯಲ್ಲಿ ಮಾತಾಡಿದ್ದೂ ಇದೆ. ಗಿಲ್ ಅವರ ಈ ಭಂಡ ಧೈರ್ಯವನ್ನು ಮುರಿಯುವ ದಿಟ್ಟತನ ತೋರಿದ ಬಜಾಜ್ ಅವರನ್ನು ಹೆಚ್ಚಿನ ಪುರುಷರೆಲ್ಲಾ ''ಇಷ್ಟು ಸಣ್ಣ ಕಾರಣಕ್ಕಾಗಿ ಏನು ರಂಪ ಮಾಡುತ್ತಾಳಪ್ಪಾ'' ಎಂದೇ ಪ್ರತಿಕ್ರಿಯಿಸಿದರು. ಇದಕ್ಕೆ ರಾಜಕೀಯ ಬಣ್ಣ ಕಟ್ಟಿ ಗಿಲ್ ವಿರೋಧಿಗಳು ಬಜಾಜ್ ಅವರನ್ನು ಸುಳ್ಳು ದೂರು ನೀಡಲು ಪ್ರೇರೇಪಿಸಿದರು ಎಂದೂ ಪ್ರಚಾರ ಮಾಡಲಾಯಿತು. ಯಾವುದಕ್ಕೂ ಜಗ್ಗದ ಬಜಾಜ್ ಹತ್ತು ವರ್ಷಗಳ ಕಾಲ ಮಾನಸಿಕ ಹಿಂಸೆ ಮತ್ತು ಕೊಲೆ ಬೆದರಿಕೆ ಎಲ್ಲವನ್ನೂ ಎದುರಿಸಿ ಹೋರಾಡಿದರು. ಕೊನೆಗೂ ಸುಪ್ರೀಂ ಕೋರ್ಟ್ ಅಪರಾಧಿ ಗಿಲ್ ಅವರಿಗೆ ಶಿಕ್ಷೆ ವಿಧಿಸಿತು. ರೂಪನ್ ಅವರಿಗೆ ಎರಡು ಲಕ್ಷ ರೂಪಾಯಿ ಪರಿಹಾರ ಧನ ಮತ್ತು ಲಿಟಿಗೇಶನ್ ಖರ್ಚು 50 ಸಾವಿರ ಗಿಲ್ ಕೊಡಬೇಕೆಂದುದಲ್ಲದೆ, ಸಾರ್ವಜನಿಕ ಸ್ಥಳಗಳಲ್ಲಿ ಕುಡಿಯಕೂಡದೆಂದು ನಿಷೇಧಾಜ್ಞೆ ಮಾಡಿದೆ. ಈ ತೀರ್ಪು ದುಡಿಯುವ ಮಹಿಳೆಗೆ ಆತ್ಮವಿಶ್ವಾಸ ಮತ್ತು ಹೊಸ ಭರವಸೆ ತುಂಬಿದೆ.

''ಭಾರತದಲ್ಲಿ ಮಧ್ಯಮ ಮತ್ತು ಮೇಲು ಮಧ್ಯಮವರ್ಗದ ಮಹಿಳೆಯರು ಲೈಂಗಿಕ ಅಪರಾಧಗಳನ್ನು ಬಹಿರಂಗ ಪಡಿಸಲು ಹಿಂಜರಿಯುತ್ತಾರೆ. ಲೈಂಗಿಕ ಅಪರಾಧ ಮತ್ತು ಅತ್ಯಾಚಾರಗಳ ಬಗ್ಗೆ ದೂರು ಕೊಡುವವರು ನೂರಕ್ಕೆ ತೊಂಬತ್ತೊಂಬತ್ತು ಜನ

ಬಡವರ್ಗಕ್ಕೆ ಸೇರಿದವರು ಅಲ್ಲವೆ ಅಪ್ರಾಪ್ತ ವಯಸ್ಕರು ಎನ್ನುತ್ತಾರೆ ಪಬ್ಲಿಕ್ ಪ್ರಾಸಿಕ್ಯೂಟರ್'' ವಸಂತಿ ಜೋಷಿ ಯಾಕೆಂದರೆ ಪುರುಷನ ಲೈಂಗಿಕ ದೌರ್ಜನ್ಯಗಳಿಗೆ ಸಮಾಜದಲ್ಲೂ ವಿಶೇಷ ರಿಯಾಯಿತಿ ಇದೆ. ಮಹಿಳೆಯ ಸ್ಥಾನಮಾನವೇ ಮಹತ್ವದ ಪ್ರಶ್ನೆಯಾಗುತ್ತದೆ. ನ್ಯಾಯ ವ್ಯವಸ್ಥೆಯಲ್ಲಿ ಶಿಕ್ಷೆ ತೀರಾ ಕಡಿಮೆ. ನ್ಯಾಯಾಧೀಶರು ಮಾನವೀಯ ಅನುಕಂಪ ಉಳ್ಳವರಾದರೆ ನ್ಯಾಯ ಬೇಗ ಸಿಗುತ್ತದೆ ಮಾತ್ರವಲ್ಲ ತಪ್ಪಿತಸ್ಥರಿಗೆ ಶಿಕ್ಷೆಯೂ ಆಗುವಲ್ಲಿ ಕಾನೂನನ್ನು ತಡೆಯುವವರು ಯಾರು ಎಂಬುದಕ್ಕೆ ಪ್ರಾರಂಭದಲ್ಲಿ ಹೇಳಿದ ಬೆಳಗಾಂನ ಕೋರ್ಟಿನ ವಧೂದಹನ (ಮಮ್ತಾಜ್) ಪ್ರಕರಣದಲ್ಲಿ ಅಲ್ಲಿನ ಸೆಶನ್ಸ್ ನ್ಯಾಯಧೀಶ ಅರಳಿ ನಾಗರಾಜ ರಾವ್ ನೀಡಿದ ತೀರ್ಪೇ ಸಾಕ್ಷಿ. ಹೆಚ್ಚಿನ ಎಲ್ಲಾ ಕೇಸುಗಳಲ್ಲಿ ಬಲವಾದ ಸಾಕ್ಷ್ಯಗಳಿದ್ದರೂ ಎಲ್ಲಾದರೂ ಒಂದು ಕಡೆ ನ್ಯಾಯ ಸೋರಿಹೋಗುವಂತಹ ತೂತುಗಳು ಇದ್ದೇ ಇರುತ್ತವೆ. ಇಲ್ಲದಿದ್ದರೆ ತೂತುಗಳನ್ನು ಮಾಡಲಾಗುತ್ತದೆ. ಮಂಗಳೂರಿನ ಶ್ರದ್ಧಾನಂದ ಆಶ್ರಮದ ಪ್ರಕರಣವೇ ಇದಕ್ಕೆ ಸಾಕ್ಷಿ.

ನಮ್ಮ ದೇಶದಲ್ಲಿ ಧರ್ಮಕ್ಕನುಸಾರವಾಗಿ ವ್ಯಕ್ತಿ ನಿಯಮಗಳಿವೆ. ಕ್ರಿಶ್ಚಿಯನ್ ಮತ್ತು ಮುಸ್ಲಿಂ ಮತದವರಿಗೆ ಅವರದೇ ಆದ ವೈಯಕ್ತಿಕ ಕಾನೂನು ಸಂಹಿತೆ ಇದೆ. ಕೇರಳದ ಸಿರಿಯನ್ ಕ್ರಿಶ್ಚಿಯನ್ ಧರ್ಮದ ಮರಿಯಾ ಕುಟ್ಟಿ ಥಾಮಸ್ ಪ್ರಕರಣದಲ್ಲಿ ಯಾವ ರೀತಿ ಮಹಿಳೆಗೆ ಅನ್ಯಾವಾಗಿದೆ ಎಂದರೆ ಕ್ರಿಶ್ಚಿಯನ್ ಉತ್ತರಾಧಿಕಾರ ನಿಯಮವು ಸಮಾನತೆಯ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ. ಕೊಟ್ಟಾಯಂನ ಮೇರಿ ರೋಯ್ (ಬೂಕರ್ ಪ್ರಶಸ್ತಿ ಪಡೆದ ಅರುಂಧತಿ ರಾಯ್ ಅವರ ತಾಯಿ) ಶ್ರೇಷ್ಠ ನ್ಯಾಯಾಲಯದಲ್ಲಿ ಉತ್ತಾರಾಧಿಕಾರಿ ನಿಯಮದ ವಿರುದ್ಧ ದೂರು ಸಲ್ಲಿಸಿದರು. ಇದನ್ನು ತಿಳಿದು ಮರಿಯಾ ಕುಟ್ಟಿಯು ಮೇರಿ ರೋಯ್‌ಯವರನ್ನು ಭೇಟಿಯಾಗಿ ನ್ಯಾಯಕ್ಕಾಗಿ ಹೋರಾಡಲು ಸಿದ್ಧರಾದರು. ಮರಿಯಾ ಕುಟ್ಟಿ ಅವಿವಾಹಿತೆ, ಬಂಧುಗಳ ಜೊತೆ ವಾಸಿಸುತ್ತಿದ್ದಳು. ಮುದುಕಿಯಾದ ಮೇಲೆ ಸೋದರರಿಗೆ ಅವರ ಪತ್ನಿಯರಿಗೆ ಆಕೆ ಹೊರೆಯಾದಳು. ಮಾನಸಿಕ ಹಿಂಸೆಯಿಂದ ಮನೆ ಬಿಡಬೇಕಾಯಿತು. ತನ್ನ ಉಳಿತಾಯದಿಂದ ಚೂರು ಜಾಗ ಕೊಂಡು ಮನೆ ಕಟ್ಟಿ 65ನೇ ವರ್ಷದಲ್ಲಿ ಒಂಟಿಯಾಗಿ ಹೊಸ ಜೀವನ ಪ್ರಾರಂಭಿಸಿದಳು. ತನ್ನ ತಂದೆ ತಾಯಿಯರ ಆಸ್ತಿಯಲ್ಲಿ ಅವಳಿಗೆ ಪಾಲು ಕೇವಲ 5,000 ರೂಪಾಯಿ ಮಾತ್ರ ಎಂದು ತಿಳಿಯಿತು. ತಿರುವಾಂಕೂರು ಕ್ರಿಶ್ಚಿಯನ್ ಉತ್ತರಾಧಿಕಾರಿ ನಿಯಮದ ಪ್ರಕಾರ ಮಗಳಿಗೆ ಮಗನ ನಾಲ್ಕನೇ ಒಂದು ಭಾಗ ಅಥವಾ 5,000 ರೂಪಾಯಿ (ಯಾವುದು ಕಡಿಮೆಯೋ ಅದು) ಮಾತ್ರ ಸಿಗುತ್ತದೆ. ಮರಿಯಾ ಕುಟ್ಟಿಯ ಹೋರಾಟಕ್ಕೆ ಸುಪ್ರೀಂ ಕೋರ್ಟಿನಲ್ಲಿ ಜಯ ಸಿಕ್ಕಿತು. ಪಾರಂಪರ್ಯವಾದ ಆಸ್ತಿಯಲ್ಲಿ ಸಮಪಾಲು ನೀಡುವ ತೀರ್ಪುಕೊಟ್ಟಿತು. ಆದರೆ ಸಮಾಜದಲ್ಲಿ ಅಲ್ಲಲ್ಲಿ ಪ್ರತಿಭಟನೆ ಕೇಳಿ ಬಂತು. ರಾಜಿ ಪಂಚಾತಿಕೆ ಮಾಡಿದ ನಿವೃತ್ತ ನ್ಯಾಯಾಧೀಶರು ಮರಿಯಾ ಕುಟ್ಟಿಗೆ ಹಲವಾರು ಅಸಂಬದ್ಧ ಪ್ರಶ್ನೆಗಳನ್ನು ಕೇಳಿ ಒಂದು ಲಕ್ಷ ರೂಪಾಯಿಗಳ ಮೊತ್ತವನ್ನು ಕೊಡಿಸಿದರು. ಸೋದರರಿಗೂ ಐದಾರು ಲಕ್ಷಗಳ ಪಾಲಿತ್ತು. ಮರಿಯಾ ಕುಟ್ಟಿ ಛಲ ಬಿಡದೆ ಎರ್ನಾಕುಲಂ ಜಿಲ್ಲಾ ನ್ಯಾಯಾಲಯದಲ್ಲಿ ದಾವೆ ಹೂಡಿದರು. ಇಂತಹ ಘಟನೆಗಳೂ ಕೂಡಾ ನ್ಯಾಯ ವ್ಯವಸ್ಥೆಯಲ್ಲಿ ನಡೆಯುತ್ತವೆ. ಮರಿಯಾ ಕುಟ್ಟಿಗೆ ನ್ಯಾಯ ದೊರೆಯಿತೋ ಇಲ್ಲವೋ ಗೊತ್ತಿಲ್ಲ. ಹೀಗೆ ಮತೀಯ ಕಾರಣಗಳಿಂದಾಗಿ ನ್ಯಾಯಾಲಯದಲ್ಲಿ ನ್ಯಾಯ ಸಲ್ಲಿಸಿದರೂ ಮಹಿಳೆಗೆ ಅನ್ಯಾಯವೇ ಆಗುತ್ತದೆ ಎಂಬುದಕ್ಕೆ ಶಾಬಾನು ಪ್ರಕರಣವೇ ಸಾಕ್ಷಿ. ಹೆಣ್ಣಿನ ಪಾಲಿಗೆ ನ್ಯಾಯಾಲಯ ಇದ್ದೇನು ಪ್ರಯೋಜನ ಎಂದು ಸಂಶಯಪಡುವಂತಾಗಿದೆ. ಬಹುಪತ್ನಿತ್ವ ಮುಸ್ಲಿಂ ಮಹಿಳೆಯರಿಗೆ ಸದಾ ತಲೆ ಮೇಲೆ ತೂಗುತ್ತಿರುವ ಕತ್ತಿಯಂತಿದೆ. ಸಮಾನ ನಾಗರಿಕ ಸಂಹಿತೆ ಜಾರಿಗೆ ಬಂದರೂ ನಮ್ಮ ಸಮಾಜ ಅದನ್ನು ತೆರೆದ ಕೈಗಳಿಂದ ಸ್ವಾಗತಿಸುತ್ತದೆ ಎಂಬುದರ ಬಗ್ಗೆ ಅನುಮಾನವಿದೆ. ಹೆಣ್ಣು ಎಲ್ಲಾ ಕ್ಷೇತ್ರಗಳಲ್ಲೂ ಗಂಡಿಗೆ ಪ್ರತಿಸ್ಪರ್ಧಿಯ ಆಗುವುದನ್ನು ನಮ್ಮ ಸಮಾಜದ ಸಂಪ್ರದಾಯವಾದಿ ಮನಸ್ಸು ಒಪ್ಪಲು ಹಿಂಜರಿಯುತ್ತದೆ. ಬಾಲ್ಯದಿಂದಲೇ ಗಂಡುಹೆಣ್ಣುಗಳನ್ನು ಬೆಳೆಸುವ ರೀತಿಯಲ್ಲಿ ಸಮಾನತೆ ಇಲ್ಲ. ಹಿಂದೆ ನಿವೃತ್ತ ನ್ಯಾಯದೀಶರೊಬ್ಬರು ''ಹೆಂಗಸರೇ ನೀವು ಮನೆಗೆ ಮರಳಿ'' ಎಂದು ಘೋಷಿಸಿ ದೊಡ್ಡ ಸುದ್ದಿಯಾಗಿದ್ದರು. ನಮ್ಮ ಸಮಾಜದ ಭಾರತೀಯ ಮನಸ್ಸು ಈ ಅನುಯುಗದಲ್ಲೂ ಹೆಣ್ಣನ್ನು 12ನೇಯ ಶತಮಾನಕ್ಕೇ ಹಿಂದಕ್ಕೆ ಒಯ್ಯಲು ಪ್ರಯತಿಸುತ್ತಿರುವುದು ವಾಸ್ತವವಾಗಿದೆ. ಮೇಲ್ನೋಟಕ್ಕೆ ಸಮಾನತೆ ಎಲ್ಲಾ ರಂಗದಲ್ಲೂ ಹೆಣ್ಣಿಗೆ ಪ್ರಾಪ್ತವಾಗಿದೆ ಎಂದು ಭಾವಿಸುವವರೇ ಹೆಚ್ಚು. ಆದರೆ ನಿಜ ಸಂಗತಿ ಬೇರೆಯೇ ಇದೆ. ಹಳ್ಳಿಯ ಹೊಲದಲ್ಲಿ ದುಡಿಯುವ ಹೆಣ್ಣಿನ ಮೇಲೆ ನಡೆವ ಅತ್ಯಾಚಾರವು ನಗರಗಳ ಕಛೇರಿಯಲ್ಲಿ ದುಡಿಯುವ ಮಹಿಳೆಗೆ ಮಾಡುವ ಕೀಟಲೆಯು ಒಂದಲ್ಲ ಒಂದು ಕಡೆ ನಡೆಯುತ್ತಾ ಇರುತ್ತದೆ. ಇತ್ತೀಚೆಗೆ ಉಡುಪಿಯಲ್ಲಿ ಆದಂತೆ ಎಲ್ಲೋ ಕೆಲವು ಕಡೆಗಳಲ್ಲಿ ಗುಲ್ಲೆಬ್ಬಿಸಿ ಎಲ್ಲರ ಗಮನ ಸೆಳೆಯುತ್ತದೆ. ನಮ್ಮ ನ್ಯಾಯ ವ್ಯವಸ್ಥೆಯಲ್ಲಿ ತಪ್ಪಿತಸ್ಥನಿಗೆ ಕ್ರೂರ ಶಿಕ್ಷೆಯಾಗುವುದು ಕಡಿಮೆಯಾದಂತೆ ಇಂತಹ ಅಪರಾಧಗಳು ಹೆಚ್ಚುತ್ತಾ ಹೋಗುತ್ತವೆ. 'ನಾಲ್ಕು ಮಂದಿ ಅಪರಾಧಿಗಳಿಗೆ ಶಿಕ್ಷೆ ತಪ್ಪಿದರೂ ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು' ಎಂಬುದು ನ್ಯಾಯ ಶಾಸ್ತ್ರದ ಧರ್ಮ. ಆದುದರಿಂದ ಅನ್ಯಾಯಕ್ಕೊಳಗಾದವರು ಸಾಕಷ್ಟು ಎಚ್ಚರ ಮತ್ತು ವಿವೇಕದಿಂದ ವ್ಯವಹರಿಸಬೇಕಾಗುತ್ತದೆ. ತನಗೆ ಶೋಷಣೆಯಾಗುತ್ತಿದೆ ಎಂಬ ಅರಿವು ಮೂಡುವವರೆಗೂ ದೌರ್ಜನ್ಯಗಳು ಮುಂದುವರಿಯುತ್ತಿವೆ. ಶೋಷಣೆಯನ್ನು ಮೌನವಾಗಿ ಸಹಿಸುವವರೆಗೂ ಶೋಷಿಸುವವರು ಇದ್ದೇ ಇರುತ್ತಾರೆ. ಈ ಪ್ರಜ್ಞೆಯನ್ನು ನ್ಯಾಯಾಲಯ ಮೂಡಿಸಲು ಸಾಧ್ಯವಿಲ್ಲ. ಅದನ್ನು ಸಮಾಜದ ಇತರ ಸಂಸ್ಥೆಗಳು ರೂಪಿಸಬೇಕು. ನ್ಯಾಯ ವ್ಯವಸ್ಥೆಯಲ್ಲೂ ಕೆಲವು ಮಿತಿಗಳಿವೆ ಎಂಬುದನ್ನು ಅರಿಯಬೇಕು. ಈ ಮಿತಿಗಳೊಳಗೆಯೂ ಕೂಡಾ ಸರಿಯಾದ ದಾರಿಯಲ್ಲಿ ಕ್ರಮಿಸಿದವರಿಗೆ ನ್ಯಾಯ ಸಿಕ್ಕಿಯೇ ಸಿಗುತ್ತದೆ ಎಂಬುದಕ್ಕೆ ಮೇಲೆ ಹೇಳಿದ ಕೆಲವು ಕೇಸುಗಳೇ ಸಾಕ್ಷಿಯಾಗಿವೆ. ಆದುದರಿಂದ ನ್ಯಾಯ ವ್ಯವಸ್ಥೆಯಲ್ಲಿ ವಿಶ್ವಾಸ ಕಳೆದುಕೊಳ್ಳುವುದು ಸರಿಯಲ್ಲ, ಅಲ್ಲವೇ ?

❑❑

ಹೊಸ ಬಾನಂಗಳದಿ
ಹೊಸ ರಾಗವ ಹಾಡುತ
ಮೈಮನ ಪುಳಕಿತ
ಸಮರಸ ಬದುಕಿಗೆ ಸಂತಸ ತರುತ
ಮತ್ತೆ ಬಂದಿತು **ಯುಗಾದಿ**

**ಶ್ರೀ ಪಾರ್ಥಿವನಾಮ ಸಂವತ್ಸರದ ಈ ಶುಭ ಸಂದರ್ಭದಲ್ಲಿ ಸುಖ, ಶಾಂತಿ, ನೆಮ್ಮದಿಯ ಬದುಕಿಗಾಗಿ ಮೂಡಿಬಂದ ಯೋಜನೆಗಳು.**

- ಪಕೃತಿ ಮಾತೆಯೊಂದಿಗೆ ಮಿಳಿತಗೊಂಡು ಎಲ್ಲರಿಗೂ ಅನ್ನದಾತನಾಗಿರುವ ರೈತನ ಕುಶಲತೆಯೇ ಸರ್ಕಾರದ ಸಫಲತೆ. ಈ ದಿಶೆಯಲ್ಲಿ ನಮ್ಮ ಹೊಲ- ನಮ್ಮ ತೋಟ, ಗಂಗಾ ಕಲ್ಯಾಣ, ಯಶಸ್ವಿನಿ, ಬೆಳೆ ವಿಮೆ ಯೋಜನೆಗಳ ಸರ್ಕಾರ.
- ನಮ್ಮ ಮೈಗೆ ಹಿತವಾದ ಉಡುಪು ನೀಡುತ್ತಾ ನೇಯ್ಗೆಯಲ್ಲಿ ನಿರತನಾಗಿರುವ ನೇತಾರ ನಮ್ಮ ನೇಕಾರ. ನೇಯ್ಗೆ ನಿರಾತಂಕವಾಗಿರಲು ವಿದ್ಯುತ್ ಸಹಾಯಧನ, ಆರೋಗ್ಯ ರಕ್ಷಣೆ, ಕಚ್ಚಾ ವಸ್ತುಗಳ ಪೂರೈಕೆ ನೆರವು.
- ಅಭಿವೃದ್ಧಿಯಲ್ಲಿ ಸಮತೋಲನ ತರಲು ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಕೈಗಾರಿಕ ವಿಕಾಸ ಸೇವೆ. ಹೊಸ ವರ್ಷದ ಮುಂಬರುವ ದಿನಗಳಲ್ಲಿ 30,000 ಜನರಿಗೆ ಉದ್ಯೋಗಾವಕಾಶ.
- ಇಂದಿನ ಮಕ್ಕಳೇ ನಾಳಿನ ನಾಗರೀಕರಲ್ಲವೇ. ಅವರಿಗಾಗಿ ಶಾಲೆಗಳಲ್ಲಿ ಇಕೋ ಕ್ಲಬ್‌ಗಳು, ಪರಿಸರ ಸಂರಕ್ಷಣೆಯ ಪಾಠ.
- ಪ್ರವಾಸವೆಂದರೇ ಆನಂದಾನುಭವ ಎನ್ನುವಂತಾಗಲು ಸುವರ್ಣ ಕರ್ನಾಟಕ ಪ್ರವಾಸಿ ತಾಣ ಯೋಜನೆ. ಆಯ್ದ ಸ್ಥಳಗಳಲ್ಲಿ ಮೂಲ ಸೌಕರ್ಯ ತಾಣ.
- ಸುವರ್ಣ ಕರ್ನಾಟಕ- ಕರ್ನಾಟಕ ರಾಜ್ಯದ 50 ಸಾರ್ಥಕ ಸಂವತ್ಸರಗಳ ಕುರುಹು. ಇದರ ಸವಿನೆನಪಿನಲ್ಲಿ ರಾಷ್ಟ್ರಕವಿ ಕುವೆಂಪು ಸಾಂಸ್ಕೃತಿಕ ಕೇಂದ್ರದ ಸ್ಥಾಪನೆ. ಖ್ಯಾತ ಕನ್ನಡ ಸಾಹಿತಿಗಳ ಕೃತಿಗಳ ಭಾಷಾಂತರ.
- ಗ್ರಾಮೀಣ ಬದುಕು ಸರ್ವಾಂಗ ಸುಂದರವಾಗಿಸಲು ಪಂಚಸೂತ್ರದ ಸ್ವಚ್ಛ ಗ್ರಾಮ, ಕುಗ್ರಾಮ-ಸುಗ್ರಾಮ, ಗ್ರಾಮೀಣ ರಸ್ತೆಗಳ ನಿರ್ವಹಣೆಗಾಗಿ ಮುಖ್ಯಮಂತ್ರಿಗಳ ರಸ್ತೆ ಅಭಿವೃದ್ಧಿ ನಿಧಿ.
- ಅಲ್ಪ ಸಂಖ್ಯಾತರಿಗಾಗಿ ಶಾದಿ ಮಹಲ್, ನಿರುದ್ಯೋಗಿ ಮಹಿಳೆಯರಿಗಾಗಿ ಕೌಶಲ್ಯ, ಹಿಂದುಳಿದ ವರ್ಗಗಳಿಗಾಗಿ ಶ್ರಮ ಶಕ್ತಿ.

ಯುಗಾದಿಯ ಬೇವು- ಬೆಲ್ಲ ತಿಂದು
ನಮ್ಮಾಶಯಗಳಿಗೆ ಯಶ ತರಲೆಂದು ಪಾಡೋಣ ಬಂಧು

ಕರ್ನಾಟಕ ವಾರ್ತೆ.

# ವಿಜ್ಞಾನ-ತಂತ್ರಜ್ಞಾನ ಮತ್ತು ಮಹಿಳೆ : ಒಂದು ಟಿಪ್ಪಣಿ

- ಜಿ. ರಾಮಕೃಷ್ಣ

ಇಲ್ಲಿ ಸಾಮಾನ್ಯವಾಗಿ ಉದ್ಭವಿಸುವ ಒಂದು ಪ್ರಶ್ನೆಯೆಂದರೆ ವಿಜ್ಞಾನ-ತಂತ್ರಜ್ಞಾನಗಳ ಬೆಳವಣಿಗೆ ಮತ್ತು ಬಳಕೆಗೆ ಎಲ್ಲಿ ಮುಕ್ತಾಯ ಹಾಡಬೇಕು ಎನ್ನುವುದು. ಯಾವ ಹಂತದಲ್ಲಿ ಅದು ಅಪಾಯಕಾರಿಯಾಗುತ್ತದೆ ಮತ್ತು ಎಲ್ಲಿಯವರೆಗೆ ಅದು ಉಪಕಾರಿ ಸಾಧನವಾಗಿರುತ್ತದೆ ಎಂಬುದನ್ನು ಎಲ್ಲರೂ ಒಂದೇ ರೀತಿಯಲ್ಲಿ ವ್ಯಾಖ್ಯಾನಿಸುವುದಿಲ್ಲ. ಬೀಸುವ ಕಲ್ಲಿನಲ್ಲಿ ರಾಗಿ ಬೀಸಿ ಅನುಭವ ಇರುವವರು ಹಿಟ್ಟಿನ ಗಿರಣಿಯನ್ನು ಅಹಿತವೆಂದು ಮೂದಲಿಸುವುದು ಅಸಂಭವ. ಭತ್ತ ಕುಟ್ಟಿ ಅಭ್ಯಾಸವಿರುವವರು ಅಕ್ಕಿ ಮಾಡುವ ಯಂತ್ರದಿಂದ ದೂರವಿರಲೇಬೇಕೆಂಬ ಹಟ ತೊಡುವುದಿಲ್ಲ. ಚಿಕ್ಕವನಿದ್ದಾಗ ಅವೆರಡನ್ನೂ ಅಲ್ಪಸ್ವಲ್ಪ ಮಾಡಿರುವ ನನಗೆ ಥೇರೀಗಾಥಾದ ಥೇರಿಯರ ಬಿಡುಗಡೆಯ ಸಂಭ್ರಮದ ಮಾತುಗಳು ಅರ್ಥವಾಗುತ್ತವೆ. ಬೀಸುವಕಲ್ಲಿನ ಬವಣೆ, ಅಡಿಗೆಮನೆಯ ಹೊಗೆ ಮತ್ತು ಗೂನುಬೆನ್ನಿನ ಗಂಡನ ಭಾರದಿಂದ ಮುಕ್ತಳಾದ ಒಬ್ಬ ಥೇರೀ ಬೌದ್ಧ ಸಂಘವನ್ನು ಹೊಗಳುವಂತೆ ಇಂದಿನ ಮಹಿಳೆಯರು ಆಧುನಿಕ ತಂತ್ರಜ್ಞಾನದ ಹಲವು ಸಾಧನೆಗಳಿಗೆ ಮೆಚ್ಚಿಗೆ ತೋರಿದರೆ ಆಶ್ಚರ್ಯವೇನೂ ಇಲ್ಲ. *

ವಿಜ್ಞಾನ-ತಂತ್ರಜ್ಞಾನಗಳ ಆವಿಷ್ಕಾರಗಳ ದುರುಪಯೋಗವು ಕೇವಲ ಮಹಿಳೆಯರ ವಲಯಕ್ಕೆ ಸೀಮಿತವಾಗಿಲ್ಲ. ಪೋಖ್ರಾನ್ ಅಣು ಆಸ್ಫೋಟದಂತಹ ಕರಾಳ ಪ್ರಯೋಗ ನಡೆದಿರುವ ಸಂದರ್ಭದಲ್ಲಿ ಇದಕ್ಕೆ ಹೆಚ್ಚಿನ ವಿವರಣೆ ಅಗತ್ಯವಿಲ್ಲ. ಎಲ್ಲವನ್ನೂ ಅಧಿಕವಾಗಿ ಮತ್ತು ಜಾಗ್ರತೆಯಾಗಿ ಉತ್ಪಾದಿಸಿಬಿಡಬೇಕೆಂಬ ಗುರಿ ಕೃಷಿ ಕ್ಷೇತ್ರದಲ್ಲಿ ಹೆಚ್ಚಾಗಿರುವುದನ್ನು ನಾವು ಗಮನಿಸಿಲ್ಲವೆ? ಹಾಲು, ಹತ್ತಿ ಗೋಧಿ, ಎಲ್ಲವನ್ನೂ ಹೊಸ ತಂತ್ರಜ್ಞಾನದ ಅಳವಡಿಕೆಯಿಂದ ಹೆಚ್ಚಾಗಿ ಉತ್ಪಾದಿಸಬೇಕು; ಮೂರು ವರ್ಷದೊಳಗಾಗಿ ತೆಂಗಿನಮರ ಫಲ ನೀಡುವಂತಾಗಬೇಕು. ಅದು ಲಾಭದ ಪ್ರಶ್ನೆ. ಅದರಿಂದ ಉಂಟಾಗುವ ಬೇರೆ ಪರಿಣಾಮಗಳನ್ನು ಗಂಭೀರವಾಗಿ ಪರಿಗಣಿಸುವಷ್ಟು ವ್ಯವಧಾನ ಮತ್ತು ಸಹನೆ ಇಲ್ಲ- ಉದಾಹರಣೆಗೆ, ಅಧಿಕ ಹಾಲಿನ ಉತ್ಪಾದನೆ; ಹಸು-ಎಮ್ಮೆಗಳಲ್ಲಿ ಹೆಚ್ಚಿನ ಹಾಲು ಉತ್ಪಾದಿಸಲು ಆಕ್ಸಿಟಾಸಿನ್ ಎಂಬ ರಾಸಾಯನಿಕದ ಬಳಕೆ ಇದೆ. ದೆಹಲಿ ಉಚ್ಚನ್ಯಾಯಾಲಯವು ಒಂದು ತಜ್ಞರ ಸಮಿತಿಯನ್ನು ನೇಮಿಸಿ ಇದರ ಪರಿಣಾಮವನ್ನು ಅಧ್ಯಯನ ಮಾಡಲು ತಿಳಿಸಿತ್ತು. ಆ ವರದಿಯ ಪ್ರಕಾರ ಹಾಲಿನಲ್ಲಿ ಉಳಿದು ಬಿಡುವ ಆಕ್ಸಿಟಾಸಿನ್ ಒಂದು ''ನಿಧಾನ ವಿಷ'', ಅದನ್ನು ತಯಾರಿಸುವುದು ಹಾರ್ಮೋನುಗಳ ಸಂಕಲನದಿಂದ. ಹಾಲಿನಲ್ಲಿ ಅದು ಸೇರದೆಯೇ ಇರಲು ಸಾಧ್ಯವಿಲ್ಲ. ಅದರ ಸೇವನೆಯಿಂದ ಗರ್ಭಕೋಶ, ಪಿತ್ತಜನಕಾಂಗ ಮತ್ತು ಮೂತ್ರಕೋಶಗಳಿಗೆ ಕ್ರಮೇಣ ರೋಗ ಅಂಟುತ್ತದೆಂದು ವರದಿಯು ತಿಳಿಸಿತು. ಆದರೆ ಅಧಿಕ ಉತ್ಪಾದನೆಯ ಕಾಹಿಲೆ ನಮ್ಮನ್ನು ಆವರಿಸಿದಾಗ ಬೇರೆ ರೋಗಗಳ ಬಗೆಗಿನ ಚಿಂತೆ ಅಷ್ಟಾಗಿ ಕಾಡುವುದಿಲ್ಲವೇನೊ!

ಮಹಿಳೆಯರೆಂಬ ಒಂದೇ ಕಾರಣದಿಂದ ಪ್ರತಿಕೂಲ ಸನ್ನಿವೇಶಗಳನ್ನು ಎದುರಿಸಬೇಕಾಗಿಬಂದ ಮಹಿಳಾ ಸಂಶೋದಕರ ದೊಡ್ಡ ಪಟ್ಟಿಯನ್ನು ಮಂಡಿಸಲು ಸಾಧ್ಯವಿದೆ. ಸಸ್ಯಜೀವಶಾಸ್ತ್ರಜ್ಞೆ ಬಾರ್ಬರಾ ಮ್ಯಾಕ್ಲಿಂಟಾಕ್ ಅಂಥವರಲ್ಲಿ ಒಬ್ಬಳು. 1923ರಷ್ಟು ಹಿಂದೆಯೇ ಆಕೆ ಮೆಕ್ಕೆಜೋಳದ ಅಧ್ಯಯನ ಮಾಡಿ ಅದರ ಜೀನ್ ಬಗ್ಗೆ ವಿವರಗಳನ್ನು ನೀಡಿದ್ದಳು. ''ಪ್ಲಾಂಟ್ ಬ್ರೀಡರ್ ಟೆಕ್ನಾಲಜಿ'' ಎಂದು ಈಗ ಹೆಸರುವಾಸಿಯಾಗಿರುವ ತಂತ್ರಜ್ಞಾನದ ಮೊಳಕೆ ಆಕೆಯ ಸಂಶೋಧನೆಯಲ್ಲಿ ಪ್ರಾಪ್ತವಾಗಿತ್ತು. ಆದರೆ ಆಕೆಗೆ ಅಮೆರಿಕಾದ ಕಾರ್ನೆಲ್ ವಿಶ್ವವಿದ್ಯಾಲಯವು ಕಾಯಂ ಸ್ಥಾನ ನೀಡಲು ನಿರಾಕರಿಸಿತ್ತಂತೆ. ಆಕೆಯ ಸಂಶೋಧನೆಗಳನ್ನು ಮುಂದುವರಿಸಲು ಎಲ್ಲೆಲ್ಲೋ ಫೆಲೋಷಿಪ್ ಅರಸಿಕೊಂಡು ಹೋಗುವುದು ಆಕೆಗೆ ಅನಿವಾರ್ಯವಾಯಿತಂತೆ. ಆದರ 1944ರಲ್ಲಿ ಜೆನೆಟಿಕ್ ಸೊಸೈಟಿಯ ಅಧ್ಯಕ್ಷೆಯನ್ನಾಗಿ ಆಯ್ಕೆ ಮಾಡಿದರು. 1940ಕ್ಕೂ ಮುಂಚೆಯೇ ಆಕೆ ಡಿಎನ್‌ಎ ಬಗೆಗೆ ಹತ್ತಾರು ಕುತೂಹಲಕಾರಿ ಸಂಗತಿಗಳನ್ನು ಹೊರಗೆಡಹಿದ್ದಳಂತೆ. ಮಹಿಳೆಯೆಂಬ ಒಂದೇ ಪೂರ್ವಗ್ರಹವು ಆಕೆಯ ಸಂಶೋಧನೆಗಳಿಗೆ ಪುಷ್ಟಿ ದೊರೆಯಲು ವಿಳಂಬವನ್ನುಂಟು ಮಾಡಿತು.

ತಂತ್ರಜ್ಞಾನದ ಪ್ರಯೋಗವನ್ನು ಕುರಿತಂತೆ ತಿಳಿವಳಿಕೆಯ ಅಭಾವವೇನೂ ಇಲ್ಲ; ಆದರೆ ಅದಕ್ಕೆ ಗುರಿಯಾಗುತ್ತಿರುವವರು ಮಹಿಳೆಯರು, ಅವರಲ್ಲೂ ಬಡ, ಅನಕ್ಷರಸ್ಥ, ಕೆಳಜಾತಿಯ ಮಹಿಳೆಯರು ಎಂಬ ಕಾರಣದಿಂದ ಅದನ್ನು ಉಪೇಕ್ಷಿಸಲಾಗುತ್ತಿದೆ. 1975ರ ಅವಧಿಯಲ್ಲಿ ಸಂಜಯಗಾಂಧಿ ನೇತೃತ್ವದಲ್ಲಿ ಮುಸಲ್ಮಾನ ಮಹಿಳೆಯರ ಮೇಲೆ ಸಂತಾನ ನಿಯಂತ್ರಣ ಕ್ರಮಗಳನ್ನು ಬಲವಂತವಾಗಿ, ಅನಾರೋಗ್ಯಕರ ಹಿನ್ನೆಲೆಯಲ್ಲಿ ಹೇಗೆ ಹೇರಲಾಯಿತೆಂದು ಸ್ಮರಿಸಿದರೆ ಅದರ ಒಂದು ಚಿತ್ರಣ ದೊರೆಯುತ್ತದೆ. ಈಚಿನ ವರ್ಷಗಳಲ್ಲಿ

ಕ್ವಿನಾಕ್ರೀನ್ ನ ಬಳಕೆ ಹೇಗೆ ಸಾಗುತ್ತಿದೆಯೆಂದು ಗಮನಿಸಿದರೆ ಅದೇ ಚಿತ್ರ ಮರುಕಳಿಸುತ್ತಿರುವುದು ಚೆನ್ನಾಗಿ ಗೊತ್ತಾಗುತ್ತದೆ. 1920ರ ಸುಮಾರಿನಲ್ಲಿ ಈ ಗುಳಿಗೆಗಳನ್ನು ಮಲೇರಿಯಾದ ಉಪಶಮನಕ್ಕಾಗಿ ಬಳಸಲಾಗುತ್ತಿತ್ತೆಂದು ಹೇಳುತ್ತಾರೆ. ಅದನ್ನು 90ರ ದಶಕದಲ್ಲಿ ಗರ್ಭನಿರೋಧಕ ತಂತ್ರಕ್ಕೆ ಅಳವಡಿಸಿಕೊಳ್ಳಲಾಯಿತು. ಅದನ್ನು ಹಾಗೆ ಬಳಸಬಹುದೇ ಎಂದು ಡಾ. ಅಶೋಕ ಮಿತ್ರ ಪಾರ್ಲಿಮೆಂಟಿನಲ್ಲಿ ಕೇಳಿದ ಒಂದು ಪ್ರಶ್ನೆಗೆ ಸರ್ಕಾರ ಕೊಟ್ಟಿದ್ದ ಉತ್ತರ ಇದು: "ಭಾರತದ ಡ್ರಗ್ ಕಂಟ್ರೋಲರ್ ಜನರಲ್‌ರು ಇದರ ಪ್ರಾಯೋಗಿಕ ಬಳಕೆಗೆ ಯಾರಿಗೂ ಪರವಾನಗಿ ನೀಡಿಲ್ಲ, ಅದನ್ನು ಉತ್ಪಾದಿಸಲು ಯಾವ ಔಷಧಿ ತಯಾರಿಕೆಯ ಕಂಪೆನಿಗೂ ಲೈಸೆನ್ಸ್ ನೀಡಲಾಗಿಲ್ಲ ಮತ್ತು ಅದನ್ನು ಆಮದು ಮಾಡಿಕೊಳ್ಳಲಾಗುತ್ತಿಲ್ಲ". ಹಾಗಿದ್ದರೆ ಅದು ಬಂದದ್ದೆಲ್ಲಿಂದ? ಆಕಾಶದಿಂದ ಉದುರಿತೆ? ಅದನ್ನು ಬಳಸುತ್ತಿರುವವರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ? ಅದನ್ನು ಪ್ರಯೋಗಿಸುತ್ತಿರುವುದು ಯಾರ ಮೇಲೆ? ಮಹಿಳೆಯರ ಮೇಲೆ, ಬಡ-ಅನಕ್ಷರಸ್ಥ ಮಹಿಳೆಯರ ಮೇಲೆ. 60ರ ದಶಕದ ಅಂತ್ಯದ ವೇಳೆಗೆ ಜೈಮ್ ಜಿಪ್ಪರ್ ಎಂಬ ಚಿಲಿ ದೇಶದ ಒಬ್ಬ ವಿಜ್ಞಾನಿ ಅದನ್ನು ಗರ್ಭಕೋಶದೊಳಕ್ಕೆ ಅಳವಡಿಸುವುದರಿಂದ ಗರ್ಭನಾಳ ಮುಚ್ಚಿಕೊಳ್ಳುತ್ತದೆಂಬ ಸಾಧ್ಯತೆಯನ್ನು ಸಂಶೋಧನೆಯ ಮೂಲಕ ತಿಳಿಸಿಕೊಟ್ಟನಂತೆ. ಅದಕ್ಕೆ ಮುಂಚೆ ಇದೇ ಪರಿಣಾಮವನ್ನು ಪಡೆಯಲು ಫಾರ್ಮಲಿನ್, ಟೆಟ್ರಸೈಕ್ಲಿನ್, ಮುಂತಾದ ಗುಳಿಗೆಗಳನ್ನು ಬಳಸುತ್ತಿದ್ದರಂತೆ. ಅವುಗಳ ಬಳಕೆಯಿಂದಾಗಿ ಗರ್ಭಕೋಶದಲ್ಲಿ ಉರಿ, ಕೊರೆತ ಉಂಟಾಗುತ್ತದೆಂದು ಕಂಡುಕೊಳ್ಳಲಾಗಿತ್ತು. ಮ್ಯೂಕಸ್ ಪದರಗಳಲ್ಲಿ ಊರಿಯೂತ ಕಂಡುಬಂದು ಕ್ರಮೇಣ ಅದು ಗಾಯದ ಗಡ್ಡೆಯಾಗಿ ಪರಿಣಮಿಸುತ್ತಿತ್ತು. ಕ್ವಿನಾಕ್ರೀನ್‌ನ ಬಳಕೆಯೂ ಇದೇ ಪರಿಣಾಮಗಳನ್ನು ನೀಡಿದೆ. ಆದರೂ ಸಂತಾನ ನಿರೋಧವು ಪ್ರಮುಖ ಆಶಯವಾದ್ದರಿಂದ ಬಡ-ಅನಕ್ಷರಸ್ಥ ಮಹಿಳೆಯರ ನೋವು-ಗಾಯಗಳು ಗೌಣವಾಗಿಬಿಟ್ಟಿತು. ನಮ್ಮ ಅನೇಕ ವೈದ್ಯರು ದೇಶದ ಸೇವೆಗಾಗಿ ಈ ಮಹಿಳೆಯರ ಆರೋಗ್ಯವನ್ನು ಬಲಿ ಕೊಡಲು ಹಿಂಜರಿಯಲಿಲ್ಲ. ಕ್ವಿನಾಕ್ರೀನ್‌ನ ಬಳಕೆಯು ಹೀಗೆ ನೋವು-ಗಾಯಗಳಿಗೆ ಎಡೆಮಾಡಿಕೊಡುತ್ತದೆಂದು ಎಕ್ಸ್-ರೇ ಸಾಧನಗಳಿಂದ ಡಾ. ಮರ್ಚೆಂಟ್ ಎಂಬ ವೈದ್ಯರು ಪ್ರಕಾಶಪಡಿಸಿದ್ದರು. ಆದರೂ ಬೇರೆ ಅಧ್ಯಯನ-ಪ್ರಯೋಗಗಳಿಗೆ ಹೋಗದೆ ಕ್ವಿನಾಕ್ರೀನಿನ ಬಳಕೆಯನ್ನು ಕಾನೂನಿಗೆ ವಿರೋಧವಾಗಿ ಜಾರಿಗೆ ತರಲಾಯಿತು! ಇದು ಹಳೆಯ ಔಷಧಿ, ಇದಕ್ಕೇಕೆ ಹೊಸ ಸಂಶೋಧನೆ ಬೇಕು ಎನ್ನುತ್ತಾರೆ ನಮ್ಮ ಕೆಲವು ವೈದ್ಯರು. ದೆಹಲಿಯ ಡಾ. ಜೆ.ಕೆ. ಜೈನ್, ಬೆಂಗಳೂರಿನ ಡಾ. ಪ್ರವೀಣ ಕಿಣಿ, ಡಾ. ಸೀತಾ ಭತೀಜಾ ಮುಂತಾದವರು 'ಚಿಪ್ ಟ್ರಸ್ಟ್' ಎಂಬ ಒಂದು ಸಂಸ್ಥೆಯನ್ನು ಹುಟ್ಟುಹಾಕಿಕೊಂಡು ಈ ಪ್ರಯೋಗವನ್ನು ಮಾಡುತ್ತಿದ್ದರೆಂದು ಸ್ವತಃ ಅವರ ಹೇಳಿಕೆಗಳಿಂದಲೇ ತಿಳಿದುಕೊಂಡದ್ದಾಗಿದೆ. (ಸಂತಾನ ನಿರೋಧಕ, ಆರೋಗ್ಯಕರ, ನವೀನ ಮಾದರಿ ಪ್ರಯೋಗ ಎಂಬುದು 'ಚಿಪ್' ಎಂಬುದರ ವಿಶಾಲಾರ್ಥ). ಒಟ್ಟಿನಲ್ಲಿ ಸಂತಾನ ನಿಯಂತ್ರಣವಾದರೆ ಸರಿ, ಕೆಲವು ಅಮಾಯಕ ಮಹಿಳೆಯರಿಗೆ ನೋವುಂಟಾದರೆ ಏನು ದೊಡ್ಡ ವಿಷಯ ಎಂಬುದು ಇವರ ವಾದದ ತಿರುಳು. ತಂತ್ರಜ್ಞಾನವನ್ನು ಮಹಿಳೆಯ ವಿರುದ್ಧ ಬಳಸುವುದರಲ್ಲಿ ಇದು ಒಂದು ಜೀವಂತ ಸಮಕಾಲೀನ ನಿದರ್ಶನ ಅಷ್ಟೆ.

ನಮ್ಮ ಕಾನೂನು ಮಹಿಳೆಯರಿಗೆ ಎಂತಹ ರಕ್ಷಣೆಯನ್ನೊದಗಿಸುತ್ತದೆ ಎಂಬುದನ್ನು ಹೆಚ್ಚಿಗೆ ಪ್ರಸ್ತಾಪಿಸಬೇಕಾಗಿಲ್ಲ. ದಿನನಿತ್ಯದ ಅನುಭವದಿಂದ ಅದನ್ನು ತಿಳಿಯಬಹುದು. ನ್ಯಾಯಾಲಯಗಳು ಕಾನೂನನ್ನು ಎತ್ತಿಹಿಡಿದಿರುವ ವೈಖರಿಯನ್ನು ನೋಡಿದರೆ ಅಷ್ಟೇನೂ ಆಶಾದಾಯಕವಾದ ಭವಿಷ್ಯ ಕಾಣುವುದಿಲ್ಲ. ಒಂದೆರಡು ನಿದರ್ಶನಗಳನ್ನು ನೋಡೋಣ: (ಅ) ದೆಹಲಿಯ ಉಚ್ಚನ್ಯಾಯಲಯದಲ್ಲಿ 1955ರ ಹಿಂದು ವಿವಾಹ ಕಾಯ್ದೆಯಡಿಯಲ್ಲಿ ಒಂದು ವಿವಾದ ದಾಖಲಾಗಿತ್ತು. 1984ರಲ್ಲಿ ಒಬ್ಬ ವಿವಾಹಿತ ಮಹಿಳೆಯು ತನ್ನ ಗಂಡನ ಅನುಮತಿಯಿಲ್ಲದೆ ಗರ್ಭಪಾತ ಮಾಡಿಸಿಕೊಂಡಿದ್ದಳು. ಅದು ಗಂಡನ ಬಗೆಗೆ ಆಕೆಯ ಕ್ರೂರ ನಡತೆಯನ್ನು ತೋರಿಸುತ್ತದೆಯೆಂಬ ಕಾರಣದಿಂದ ನ್ಯಾಯಾಲಯವು ವಿವಾಹ ವಿಚ್ಛೇದನೆಯನ್ನು ಜಾರಿ ಮಾಡಿತು. ಅದು ಆ ಮಹಿಳೆಗೆ ತಕ್ಕ ಶಿಕ್ಷೆಯೆಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು. (ಆ) 1993ರಲ್ಲಿ ಮದ್ರಾಸ್ ಉಚ್ಚನ್ಯಾಯಾಲದೆದುರು ಒಬ್ಬ 16 ವರ್ಷದ ಬಾಲಕಿಯ ತಂದೆ ದೂರನ್ನು ದಾಖಲು ಮಾಡಿದ್ದ. ಅವಳು ಅವಿವಾಹಿತ ಬಾಲಕಿ. ಅವಳು ಮಗುವನ್ನು ಹೆರಲು ಇನ್ನೂ ಬಹಳ ಚಿಕ್ಕವಳಾದ್ದರಿಂದ ಗರ್ಭಪಾತ ಮಾಡಿಕೊಳ್ಳಲು ಆದೇಶಿಸಬೇಕೆಂದು ಅವನು ನ್ಯಾಯಾಲಯವನ್ನು ಕೋರಿದ್ದ. ಬಾಲಕಿಯು ತನ್ನ ವಕೀಲರ ಮೂಲಕ ಅದನ್ನು ವಿರೋಧಿಸಿ ತನ್ನ ಜೀವ ಮತ್ತು ಸ್ವಾತಂತ್ರ್ಯ ಹಕ್ಕುಗಳು ಮೂಲಭೂತ ಹಕ್ಕುಗಳಾದ್ದರಿಂದ ತಾನು ಮಗುವನ್ನು ಹೆರುವುದನ್ನು ಯಾರೂ ತಪ್ಪಿಸುವಂತಿಲ್ಲವೆಂದು ವಾದಿಸಿದಳು. ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಅನುಭೋಗಕ್ಕೆ ವಯಸ್ಸಿನ

ಪರಿಮಿತಿಯನ್ನೇನೂ ವಿಧಿಸಿಲ್ಲವಾದ್ದರಿಂದ ಮಗುವನ್ನು ಹೆರಲು ಅಡ್ಡಿ ಪಡಿಸುವಂತಿಲ್ಲವೆಂದೂ ಅವಳು ವಾದಿಸಿದಳು. ಬಾಲಕಿಯ ಅಭಿಪ್ರಾಯವನ್ನು ನ್ಯಾಯಾಲಯವು ಎತ್ತಿ ಹಿಡಿಯಿತು. ಆದರೆ ಹಾಗೆ ಮಾಡುವಾಗ ಎರಡು ಹೇಳಿಕೆಗಳನ್ನು ನೀಡಿತು:

1. ತಾಯಿಯು ಚಿಕ್ಕವಳಿದ್ದಷ್ಟು ಹೆರುವ ಕ್ರಿಯೆ ಸಾಂಗವಾಗಿ ನೆರವೇರುತ್ತದಾದ್ದರಿಂದ ಅಪ್ರಾಪ್ತ ವಯಸ್ಸಿನವಳೆಂದು ವಾದ ಹೂಡಿದ ತಂದೆಯ ಅಭಿಪ್ರಾಯಕ್ಕೆ ಮನ್ನಣೆ ನೀಡಲಾಗುವುದಿಲ್ಲ ಮತ್ತು 2. ತಾಯಿಯ ಗರ್ಭದಲ್ಲಿರುವ ಜೀವವನ್ನು ನಾಶಪಡಿಸಲು ಯಾವ ನೈತಿಕ ಪರವಾನಗಿಯೂ ಇರಲು ಸಾಧ್ಯವಿಲ್ಲ.

ಅಂದರೆ, ಪೋಪನ ಮಾದರಿಯಲ್ಲಿ ಗರ್ಭಪಾತವನ್ನು ವಿರೋಧಿಸಿದ ನ್ಯಾಯಾಲಯವು ನೂತನ ತಂತ್ರಜ್ಞಾನಕ್ಕೆ ಯಾವ ಬೆಲೆಯನ್ನೂ ನೀಡಲಿಲ್ಲ. ಎರಡನೆಯದಾಗಿ, ಒಬ್ಬ ವ್ಯಕ್ತಿಯ ಹಕ್ಕನ್ನು ಮಾನ್ಯ ಮಾಡಲು ನ್ಯಾಯಾಲಯವು ತಾಯಿತನದ ಬಗೆಗಿನ ಸಾಂಪ್ರದಾಯಿಕ ನಂಬಿಕೆಯನ್ನೇ ಸಂಪೂರ್ಣವಾಗಿ ಅವಲಂಬಿಸಿತು. ವಿಜ್ಞಾನ-ತಂತ್ರಜ್ಞಾನಗಳ ಉಪಯೋಗವನ್ನು ಭಾರತೀಯ ಮಹಿಳೆ ಯಾವ ರೀತಿಯಲ್ಲೇ ಆಗಲಿ ಪಡೆಯಬೇಕಾದರೆ ಮೊದಲು ಸಂಪ್ರದಾಯದ ಚೌಕಟ್ಟನ್ನು ಮುರಿದು ಹೊರಗೆ ಬರಬೇಕಾದ ಆಗತ್ಯವನ್ನು ಇದು ಒತ್ತಿ ಹೇಳುತ್ತದೆ.

ದೆಹಲಿಯ ಒಂದು ಮಹಿಳಾ ಸಂಘಟನೆಯು 1986ರಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಅಹವಾಲೊಂದನ್ನು ಸಲ್ಲಿಸಿ ಆಗ್ಗೆ ಗರ್ಭನಿರೋಧಕವಾಗಿ ನೀಡಲಾಗುತ್ತಿದ್ದ ನೆಟ್ ಎನ್ ಚುಚ್ಚುಮದ್ದನ್ನು ಪ್ರತಿಬಂಧಿಸಬೇಕೆಂದು ಕೇಳಿಕೊಂಡಿತ್ತು. ಬೇರೆಷ್ಟೋ ದೇಶಗಳಲ್ಲಿ ಅದು ಅಸಮರ್ಪಕ ಹಾಗೂ ಅಪಾಯಕಾರಿ ಚುಚ್ಚುಮದ್ದೆಂದು ನಿರಾಕರಿಸಲ್ಪಟ್ಟಿತ್ತಾದ್ದರಿಂದ ಭಾರತದಲ್ಲೂ ಅಂತಹ ನಿಷೇಧವನ್ನು ಜಾರಿಗೊಳಿಸಬೇಕೆಂಬುದು ನಿರಾಕರಿಸಲ್ಪಟ್ಟಿತ್ತಾದ್ದರಿಂದ ಭಾರತದಲ್ಲೂ ಅಂತಹ ನಿಷೇಧವನ್ನು ಜಾರಿಗೊಳಿಸಬೇಕೆಂಬುದು ಇದರ ಆಶಯ. ಆದರೆ ನ್ಯಾಯಾಲಯವು ಅದಕ್ಕೆ ಸೊಪ್ಪು ಹಾಕಲಿಲ್ಲ. ಇದರಿಂದ ಒಂದು ದೊಡ್ಡ ಪೆಟ್ಟು ಬಿದ್ದು ಮುಂದೆ ತಂತ್ರಜ್ಞಾನದ ದುರ್ಬಳಕೆಯು ಮಹಿಳೆಯರ ವಿರುದ್ಧ ಪರಾಕಾಷ್ಠೆಯನ್ನು ಮುಟ್ಟಿತು. ಆಮ್ನಿಯೋಸೆಂಟಿಸಿಸ್‌ನ ವಿಧಾನದಿಂದ ಹೆಣ್ಣುಮಕ್ಕಳ ಭ್ರೂಣ ಹತ್ಯೆಯು ವಿಪರೀತವಾಗಿ ಹೆಚ್ಚಿದ್ದು ಈ ಹಿನ್ನೆಲೆಯಲ್ಲಿ. ಪರಿಣಾಮವಾಗಿ 1988ರಲ್ಲಿ ಆ ವಿಧಾನವನ್ನು ಕೈಬಿಡಬೇಕೆಂಬ ಆಜ್ಞೆಯನ್ನು ಮಹಾರಾಷ್ಟ್ರ, ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲಿ ಹೊರಡಿಸಲಾಯಿತು. ಮಹಿಳೆಯ ಬಗ್ಗೆ ಎಂತಹ ಉಪೇಕ್ಷೆ ಇದೆಯೆಂಬುದಕ್ಕೆ ಇದೊಂದು ನಿದರ್ಶನ ಸಾಕು. ಆ ವಿಧಾನವು ಕಾನೂನುಬಾಹಿರವಾಗಿ ಎಲ್ಲೆಲ್ಲೂ ಜಾರಿಯಲ್ಲಿರುವುದು ಲೋಕಕ್ಕೆ ತಿಳಿದಿದೆ; ಆದರೆ 1998ರವರೆಗೆ ಆ ನಿಯಮ ಉಲ್ಲಂಘನೆಗಾಗಿ ಇಡೀ ರಾಷ್ಟ್ರದಲ್ಲಿ ಒಂದೇ ಒಂದು ದೂರು ಸಹ ಯಾವ ನ್ಯಾಯಾಲಯದಲ್ಲೂ ದಾಖಲಾಗಲಿಲ್ಲ! ಈಗಲೂ ಆ ವಿಧಾನ ವ್ಯಾಪಕವಾಗಿಯೇ ಬಳಕೆಯಲ್ಲಿದೆಯೆಂಬುದು ಕಾನೂನು ರಕ್ಷಕರಿಗೆ ತಿಳಿಯದೆ ಇಲ್ಲ.

ಈ ವಿಧಾನವು ಗರ್ಭಪಾತದ ಪೂರ್ಣವಿರೋಧಿಯಲ್ಲ. ಏಕೆಂದರೆ ಒಂದು ಲಿಂಗದ ಮಗು ಗರ್ಭದಲ್ಲಿದ್ದರೆ ಮಾತ್ರ ಗರ್ಭಪಾತವನ್ನು ವಿರೋಧಿಸುವ ಕ್ರಮ ಇದು. ಗಂಡು ಮಗುವಿದ್ದರೆ ಗರ್ಭಪಾತ ಬೇಡ. ಹೆಣ್ಣು ಮಗುವಾದರೆ ಅದು ನಿರ್ದಾಕ್ಷಿಣ್ಯವಾಗಿ ನಡೆಯಲಿ! ಇದಕ್ಕೆ ಒಂದು ಬುದ್ಧಿವಂತ ತರ್ಕವನ್ನೂ ಬೆಳಸಲಾಗಿದೆ. ತಾಯಿಗೆ ಗರ್ಭಪಾತದ ಹಕ್ಕನ್ನು ಮಾನ್ಯ ಮಾಡಬೇಕೆಂದು ಹೇಳುವವರು ಭ್ರೂಣದ ಹಕ್ಕಿನತ್ತ ಏಕೆ ಗಮನಹರಿಸುವುದಿಲ್ಲ ? ಅರ್ಥಾತ್, ಇಲ್ಲಿ ಕಾನೂನಿನ ಪ್ರಶ್ನೆ ಉದ್ಭವಿಸುವುದಿಲ್ಲ; ತಂತ್ರಜ್ಞಾನವನ್ನು ಸಾಂಪ್ರದಾಯಿಕ ಪೂರ್ವಗ್ರಹಗಳ ಬಲಪಡಿಸುವಿಕೆಗೆ ಬಳಸಲಾಗಲಿ. ಹೆಣ್ಣು ತಂದೆಯ ಹೃದಯವನ್ನು ಹಿಂಡುವವಳು (ದಾರಿಕಾ ಹೃದಯದಾರಿಕಾ ಪಿತ್ರಃ - ಇದು ವೈದಿಕ ಸಾಹಿತ್ಯದ ಭಾಗವಾದ ಐತರೇಯ ಬ್ರಾಹ್ಮಣದ ಮಾತು); ಆದ್ದರಿಂದ ಆಮ್ನಿಯೋಸೆಂಟಿಸಿಸ್ ತಂತ್ರಜ್ಞಾನವು ಹೆಣ್ಣು ಭ್ರೂಣವನ್ನು ಸಂಹರಿಸಲು ಸಹಾಯ ಮಾಡಲಿ!

ಮುಂಬೈನಲ್ಲಿ ಈ ವಿಧಾನದ ಬಳಕೆಯ ಬಗ್ಗೆ ಡಾ. ಸಂಜೀವ ಕುಲಕರ್ಣಿಯವರು ಆಳವಾದ ಅಧ್ಯಯನ ಮಾಡಿ ಮಾಹಿತಿಯನ್ನು ಕಲೆಹಾಕಿದ್ದಾರೆ. ಅವರ ಪ್ರಕಾರ 1978ರಿಂದ 82ರವರೆಗಿನ ನಾಲ್ಕು ವರ್ಷಗಳ ಅವಧಿಯಲ್ಲಿ 78,000 ಹೆಣ್ಣು ಭ್ರೂಣಗಳನ್ನು ಸಂಹರಿಸಲಾಗಿದೆ. ಈ ವಿಧಾನವನ್ನು ಬಳಸುವ ಐವತ್ತು ವೈದ್ಯರು ಅದನ್ನು ಶೇ. 84ರಷ್ಟು ಮಟ್ಟದಲ್ಲಿ ಬಳಸಿದ್ದು ಭ್ರೂಣಹತ್ಯೆಗಾಗಿಯೇ ವಿನಾ ಜನನ ಪೂರ್ವದಲ್ಲಿ ಮಗುವಿನಲ್ಲಿರಬಹುದಾದ ವ್ಯತ್ಯಯಗಳನ್ನು ಗುರುತಿಸಲು ಅಲ್ಲ. ಇದು ನಾವು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿರುವುದಕ್ಕೆ ಹಿಡಿದ ಕನ್ನಡಿಯಾಗಿದೆ.

ಇಂತಹ ಸನ್ನಿವೇಶದಲ್ಲಿ ವಿಜ್ಞಾನ-ತಂತ್ರಜ್ಞಾನಗಳ ದುರ್ಬಳಕೆಯೇ ಆಗಿಲ್ಲವೇನೋ ಎಂಬ ರೀತಿಯಲ್ಲಿ ಅಥವಾ ಆಗಿದ್ದರೂ ಅಂತಹ ಪ್ರಮಾದವಲ್ಲ ಎಂಬ ರೀತಿಯಲ್ಲಿ ವ್ಯಾಖ್ಯಾನ ನೀಡುವವರೂ ಇದ್ದಾರೆಂದರೆ ಅದು ಕೌತುಕದ

ಸಂಗತಿ. ಧರ್ಮಾ ಕುಮಾರ್ ಎಂಬ ಮಹಿಳಾ ಬುದ್ಧಿಜೀವಿಯು 1983ರಷ್ಟು ಹಿಂದೆಯೇ ತನ್ನ ಕೆಲವು ಪ್ರಬಂಧಗಳಲ್ಲಿ ಇಂತಹ ಮನೋಭಾವವನ್ನು ಪ್ರಕಟಿಸಿದ್ದುದುಂಟು. ಆಕೆಯ ಅಸಾಧರಣ ತರ್ಕವನ್ನು ಸರಳವಾಗಿ ನಿರೂಪಿಸುವುದಾದರೆ ಅದು ಹೀಗಿರುತ್ತದೆ:

ಆಮ್ನಿಯೋಸೆಂಟಿಸಿಸ್‌ನಂತಹ ವಿಧಾನಗಳಿಂದ ಲಿಂಗವನ್ನಾಧರಿಸಿ ಮಕ್ಕಳನ್ನು ಪಡೆಯುವುದರಿಂದ (ಅಂದರೆ, ಹೆಣ್ಣು ಭ್ರೂಣವನ್ನು ಸಂಹರಿಸಿ ಕೇವಲ ಗಂಡು ಮಕ್ಕಳನ್ನೇ ಆಯ್ಕೆ ಮಾಡಿಕೊಳ್ಳುವುದರಿಂದ) ಬದುಕಿರುವ ಹೆಣ್ಣುಮಕ್ಕಳ ಮೌಲ್ಯ, ಸ್ಥಾನಮಾನ ಹೆಚ್ಚುತ್ತದೆ; ಏಕೆಂದರೆ ದೇಶದಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗಿ ಗಂಡು-ಹೆಣ್ಣುಗಳ ಪ್ರಮಾಣ ಹೆಣ್ಣಿಗೆ ಅನುಕೂಲವಾಗುವಂತಿರುತ್ತದೆ. ಆದ್ದರಿಂದ ಆಗ ವರದಕ್ಷಿಣೆಯ ಪಿಡುಗು ಕಡಿಮೆಯಾಗುತ್ತದೆ. ಹೆಣ್ಣು ಸಿಕ್ಕಿದರೆ ಸಾಕೆಂಬ ತವಕವಿರುವಾಗ ಯಾರು ತಾನೆ ವರದಕ್ಷಿಣೆ ನಿರೀಕ್ಷಿಸುತ್ತಾರೆ? ಹೀಗಾಗಿ, ಹೆಣ್ಣಿನ ಸ್ಥಾನಮಾನ ಉತ್ತಮಗೊಳ್ಳುತ್ತದೆ. ಎರಡನೆಯದಾಗಿ, ಇಂತಹ ಭ್ರೂಣ ಪರೀಕ್ಷೆಯಲ್ಲಿ ಹೆಚ್ಚಾಗಿ ತೊಡಗುವವರು ಯಾರು? ಶ್ರೀಮಂತರು (ಇದು ನಿಜವೆಂಬುದಕ್ಕೆ ಧರ್ಮಾ ಯಾವ ಅಂಕಿ-ಸಂಖ್ಯೆಯ ಆಧಾರವನ್ನೂ ನೀಡಿಲ್ಲ) ಆದರ ಪರಿಣಾಮವೇನು? ಶ್ರೀಮಂತ ಕುಟುಂಬಗಳವರು ಮುಂದೆ ಶ್ರೀಮಂತರಲ್ಲದ ಕುಟುಂಬಗಳಿಂದ ಹೆಣ್ಣನ್ನು ಪಡೆಯಬೇಕಾಗುತ್ತದೆ. ಅಂದರೆ, ಬಡ ಕುಟುಂಬಗಳವರನ್ನು ಅವರು ಆಶ್ರಯಿಸುತ್ತಾರೆ. ತಮ್ಮ ಪಂಗಡದಲ್ಲೇ ಹೆಣ್ಣು ದೊರಕದಿದ್ದರೆ ಬೇರೆ ಪಂಗಡಗಳಿಂದ, ಪ್ರದೇಶಗಳಿಂದ ಪಡೆಯಬೇಕು. ಇದರಿಂದಾಗಿ ಬಡವ-ಶ್ರೀಮಂತ ಎಂಬುದು ಕೌಟುಂಬಿಕ ಸಂಬಂಧಗಳಲ್ಲಿ ಕಡಿಮೆಯಾಗುತ್ತದೆ, ಜಾತಿಯ ನಿರ್ಬಂಧವೂ ಕಡಿಮೆಯಾಗುತ್ತದೆ. ವರಮಾನದ ವಿತರಣೆ ಸಮಾಜವನ್ನು ನಿಧಾನವಾಗಿ ಸಮಾನತೆಯತ್ತ ಕೊಂಡೊಯ್ಯುತ್ತದೆ. ಆದ್ದರಿಂದ ಲಿಂಗದ ಆಯ್ಕೆಯನ್ನು ತಂತ್ರಜ್ಞಾನವು ಪೋಷಿಸುವ ಪ್ರಕ್ರಿಯೆ ಸ್ವಾಗರ್ತಾಹವಾದದ್ದು.

ತರ್ಕವು ಮನೋಹರವಾಗಿ ಕಾಣಿಸುತ್ತದಲ್ಲವೆ? ಆದರೆ ಅದು ಶುದ್ಧ ತರ್ಕವಲ್ಲ ಏಕೆಂದರೆ, ಕಾರ್ಯ-ಕಾರಣಗಳ ಲೆಕ್ಕಾಚಾರದಲ್ಲಿ ಧರ್ಮಾ ಅವರು ಹತ್ತಾರು ಅಂಶಗಳನ್ನು ಸಾಧ್ಯತೆಗಳನ್ನು ಪರಾಮರ್ಶಿಸುವ ಬದಲು ತಮಗೆ ಅನುಕೂಲವೆಂದು ಕಂಡುಬಂದ ಒಂದು ದಿಕ್ಕಿನಲ್ಲಿ ಧಾವಿಸಿದ್ದಾರೆ. ಇದನ್ನು ಲೀಲಾ ದುಬೆ ಅವರು ಬಹಳ ಹಿಂದೆಯೇ ವಿಶ್ಲೇಷಣೆ ಮಾಡಿ ತೋರಿಸಿದ್ದರು. ಉದಾಹರಣೆಗೆ, ಗಂಡು-ಹೆಣ್ಣುಗಳ ಪ್ರಮಾಣವು ಧರ್ಮಾ ಅವರು ನಿರೀಕ್ಷಿಸುವ ಮಟ್ಟಕ್ಕೆ ಇಳಿದರೆ ಆಗ ಶ್ರೀಮಂತರು ಬಡಕುಟುಂಬದಿಂದ ಹೆಣ್ಣು ತಂದುಕೊಳ್ಳುತ್ತಾರೋ, ಅಥವಾ ಶ್ರೀಮಂತ ಯುವಕ ಗುಂಡಾಗಳು ಮನಸೋ ಇಚ್ಛೆ ಬೇರೆ ಹೆಣ್ಣುಗಳನ್ನು ಅಪಹರಿಸುತ್ತಾರೋ ಹೇಗೆ ಹೇಳುವುದು? ಅಥವಾ, ಹೆಣ್ಣುಗಳ ಪ್ರಚ್ಛನ್ನ ಮಾರಾಟ ಆಗುವ ಪ್ರಮೇಯವೂ ಇರುತ್ತದೆ. ಅಥವಾ ಬಹುಪತಿತ್ವದ ಸನ್ನಿವೇಶ ಏಕೆ ಹುಟ್ಟಿಕೊಳ್ಳಬಾರದು?

ಇದರರ್ಥವಿಷ್ಟೆ : ವಿಜ್ಞಾನ-ತಂತ್ರಜ್ಞಾನಗಳ ಪರಿಣಾಮಗಳನ್ನು ಸರಳೀಕರಿಸಿ ಹೆಣ್ಣಿನ ಸ್ಥಾನಮಾನವನ್ನು ಹೀಗೆಯೇ ಇರುತ್ತದೆಂದು ನಿರ್ಧರಿಸಿ ಹೇಳಲಾಗುವುದಿಲ್ಲ. ಹಿಂದಿನದನ್ನಾಗಲಿ ಇಂದಿನ ಯಾವುದಾದರೊಂದು ಭಾವಿತ ಸನ್ನಿವೇಶವನ್ನಾಗಲಿ ವೈಭವೀಕರಿಸದೆ ವಸ್ತುನಿಷ್ಠವಾಗಿ ವೀಕ್ಷಿಸಿದರೆ, ವಿಶ್ಲೇಷಿಸಿದರೆ ಯಾವುದು ಮೂರ್ತ, ಯಾವುದು ಸಂಭಾವ್ಯ, ಯಾವುದು ಸ್ವಾಗತಾರ್ಹ ಎಂಬುದು ತಿಳಿಯುತ್ತದೆ. ಅಸಹಜವಾದ ಮತ್ತು ಅಪ್ರಾಯೋಗಿಕವಾದ ಮಾತುಗಳನ್ನಾಡದಿರುವುದು ಮಹಿಳೆಗೆ ನಾವು ತೋರಬೇಕಾದ ಕನಿಷ್ಠ ಸೌಜನ್ಯ.

ಸೆಪ್ಟೆಂಬರ್ 1999ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ನೊಬೆಲ್ ಪುರಸ್ಕೃತ ವಿಜ್ಞಾನಿ ರಿಚರ್ಡ್ ಅರ್ನ್‌ಸ್ಟ್ ಎಂಬುವವನ ಕೆಲವು ಅಭಿಪ್ರಾಯಗಳನ್ನು ಗಮನಿಸಿ ವಿಷಯವನ್ನು ಚರ್ಚೆಗೆ ಬಿಡೋಣ:

ಜೀವತಂತ್ರಜ್ಞಾನದ ಸಂಶೋಧನೆಗಳನ್ನು ಸಂಪೂರ್ಣವಾಗಿ ನಿಷೇಧಿಸಬೇಕೆನ್ನುವುದು ಅವಿವೇಕದ ಮಾತು. ಭವಿಷ್ಯದ ಜನಾಂಗಗಳಿಗೆ ಅಸ್ತಿತ್ವವನ್ನು ನಿರಾಕರಿಸುವ ಅಪಾಯ ಅದರಲ್ಲಿ ಅಡಗಿದೆ. ಹಾಗೆಂದ ಮಾತ್ರಕ್ಕೆ ಇಂತಹ ಸಂಶೋಧನೆಗಳಲ್ಲಿ ತೊಡಗಿರುವವರಿಗೆ ಯಾವ ನಿರ್ಬಂಧವೂ ಇರಬಾರದೆಂದಲ್ಲ. ಜೀವತಂತ್ರಜ್ಞಾನವು ಸ್ವತಃ ಕೆಡುಕನ್ನೇನೂ ತರಲಾರದು; ಅದನ್ನು ದುರಪಯೋಗಪಡಿಸಿಕೊಳ್ಳದಿದ್ದರೆ ಸಾಕು, ಅಷ್ಟೆ ಹಾಗೆಂದು ಸಂಶೋಧನೆಗೆ ಕಡಿವಾಣ ಹಾಕಿದರೆ ಅದೂ ಸರಿಹೋಗದು. ವಿಜ್ಞಾನ-ತಂತ್ರಜ್ಞಾನಗಳಿಂದ ಅಪಾರ ಹಣ ಸೂರೆ ಮಾಡುವ ಪ್ರವೃತ್ತಿ ಜಗತ್ತಿನಲ್ಲೆಲ್ಲಾ ಇತ್ತೀಚೆಗೆ ಹೆಚ್ಚಾಗಿದೆ. ಅದರಿಂದಾಗಿ ವಿಜ್ಞಾನಿಗಳ ನೈತಿಕ ಪ್ರಜ್ಞೆ ಕಪ್ಪಾಗಿದೆ. ಜೀವತಂತ್ರಜ್ಞಾನದಂತಹ ಕ್ಷೇತ್ರದ ವಿಜ್ಞಾನಿಗೆ ಸಾಮಾಜಿಕ ಜವಾಬ್ದಾರಿ ಇಲ್ಲದಿದ್ದರೆ ಅದೊಂದು ದುರಂತದ ಸನ್ನಿವೇಶ. ಭೂಕಂಪದ ಸುಳಿವಾದರೂ ದೊರೆತೀತೇನೋ, ಆದರೆ ಜೀವತಂತ್ರಜ್ಞಾನದ ಆಳ ಅರಿವಿಗೆ ಬರಲಾರದು. ಆದ್ದರಿಂದ ನಾವು ಜವಾಬ್ದಾರಿಯುತವಾಗಿ ಸಂಶೋಧನೆಗಳಲ್ಲಿ ತೊಡಗುವುದು ಅತ್ಯವಶ್ಯಕ.

❑❑

# ಕಿನ್ನೂರಿ ನುಡಿಸುವವನ ದನಿ ಚಂದವೋ...

- ವನಮಾಲ ಕಟ್ಟೇಗೌಡರ

ಮಾನವನ ಕೌಟುಂಬಿಕ ಬದುಕು ನೆಲೆ ನಿಂತಿರುವುದು 'ಸ್ವಸ್ಥ' ದಾಂಪತ್ಯದ ತಳಹದಿಯ ಮೇಲೆ. ಇಲ್ಲಿ ಗಂಡ-ಹೆಂಡತಿ ಇಬ್ಬರೂ ಪತಿ-ಪತ್ನಿಯರಿಗಿಂತ ಸಖ-ಸಖಿಯರಾದಾಗ ಮಾತ್ರ ಅವರ ದಾಂಪತ್ಯ ಸುಖಿ-ಸಫಲ ದಾಂಪತ್ಯವಾಗುವುದು. ಇಲ್ಲದೇ ಹೋದಲ್ಲಿ 'ಎತ್ತು ಏರಿಗೆಳದರೆ ಕೋಣ ಕೋರಿಗೆಳೆಯಿತು' ಎಂಬ ಗಾದೆಯಂತೆ ಆ ದಾಂಪತ್ಯ ಅಸಫಲತೆಯತ್ತ ಸಾಗುವುದು. ದಾಂಪತ್ಯ ಜೀವನದಲ್ಲಿ ಗಂಡ-ಹೆಂಡಿರ ಮಧ್ಯೆ 'ಸಖ-ಸಖಿ' ಭಾವ ಅವಿರ್ಭಾವಗೊಳ್ಳಲೇ ಬೇಕಾದ ಅನಿವಾರ್ಯತೆಯನ್ನು ಬೇಂದ್ರೆಯವರು ತಮ್ಮ 'ಸಖೀಗೀತ'ದಲ್ಲಿ

**'ನಾದದ ಸೆಳೆಮಿಂಚು, ಸಮತೆಯ ಗೆಳೆಸಂಚು**
**ಎಸಳಿನ ಎಳೆಯಂಚು ಎಳೆದೀತೇನೆ?**

ಎಂದು ತುಂಬ ಸುಂದರವಾಗಿ ಕಟ್ಟಿಕೊಡುತ್ತಾರೆ. ಹೀಗೆ ಸುಖೀ ದಾಂಪತ್ಯದ ಸಾಕಾರಕ್ಕೆ ಪತಿ-ಪತ್ನಿಯರಲ್ಲಿ ಸಖ-ಸಖಿ ಭಾವ ಅಂತರ್ಗತವಾಗಬೇಕು. ಇಲ್ಲದೇ ಹೋದಲ್ಲಿ ದಾಂಪತ್ಯ ಬದುಕಿನಲ್ಲಿ ಪತಿ ಅಥವಾ ಪತ್ನಿಯ ಮನಸ್ಸು ಬೇರೆಡೆ ಹೊರಳುವುದುಂಟು. ಆಗ ಆ ದಾಂಪತ್ಯ ಮುರಿದ್ದು ಬೀಳಬಹುದು. ಇಲ್ಲವೆ ಅನೈತಿಕ ಸಂಬಂಧಗಳಿಗೆ ದಾರಿಯಾಗಬಹುದು. ಈ ವಿದ್ಯಮಾನಗಳನ್ನು ತಿಳಿಸುವ ಜನಪದ ಗೀತೆಯೇ 'ಜೋಗಿಪದ'. ಈ ಜನಪದಗೀತೆ ಒಂದು 'ಕಥನ ಕವನ'ವಾಗಿದ್ದು ಸಾಕಷ್ಟು ಪ್ರಸಿದ್ಧಿ ಪಡೆದುದುದಾಗಿದೆ.

ಈ ಗೀತೆಯಲ್ಲಿ ಒಂದು ಹೆಣ್ಣು ದಾಂಪತ್ಯ ಬದುಕಿನ 'ಎಲ್ಲೆ' ದಾಟಿ ಒಬ್ಬ ತಿರುಕ ಜೋಗಿಯ ಕೂಡ ಹೋಗುತ್ತಿರುವ ದೃಶ್ಯವಿದೆ. ಹಾಗೆ ಹೊರಟ ಆ ಹೆಣ್ಣು ಜೋಗಿಯನ್ನು 'ತುರುಬಿಗೆ ಮೊಗ್ಗಾಗಿ ಬಾ' ಎಂದು ಆಹ್ವಾನಿಸುತ್ತಾಳೆ. ಹೊಲ, ಮನೆ, ಒಳ್ಳೆಯ ಗಂಡ... ಮುಂತಾಗಿ ಎಲ್ಲವನ್ನೂ ಬಿಟ್ಟು ನನ್ನ ಹಿಂದೆ ಹೀಗೆ ಬರಬಹುದೆ? ಎಂದು ಜೋಗಿ ನಾರಿಯನ್ನು ಕೇಳುತ್ತಾನೆ. ಅದಕ್ಕುತ್ತರವಾಗಿ ಅವಳು ಜೋಗಿಯನ್ನು ಕಂಡಾಗಿನಿಂದ ತನ್ನ ನಿದ್ರೆ-ನೆಮ್ಮದಿಗಳು ಹಾರಿ ಹೋದ ಬಗೆಯನ್ನು ತಿಳಿಸುತ್ತಾಳೆ. ಕೊನೆಗೆ ಆತ ಸಮ್ಮತಿಸಿ ಅವಳನ್ನು ಸ್ವೀಕರಿಸುವುದರೊಂದಿಗೆ ಹಾಡು ಮುಗಿಯುತ್ತದೆ.

ಈ ಕಥನ ಕವನ ಹೆಣ್ಣೊಬ್ಬಳ ಅನೈತಿಕ ಸಂಬಂಧದ ಬಗ್ಗೆ ತಿಳಿಸುವಂತೆ ಮೇಲ್ನೋಟಕ್ಕೆ ಕಂಡು ಬರಬಹುದಾದರೂ ತನ್ನ ಆಳದಲ್ಲಿ ಅನಂತ ಅರ್ಥಸೂಕ್ಷ್ಮಗಳನ್ನು ಹೊಂದಿದೆ. ಈ ಕಥನಗೀತೆಯನ್ನು ಓದಿ ಮುಗಿಸಿದಾಗ ಮೊದಲನೆಯದಾಗಿ ಮೂಡುವ ಪ್ರಶ್ನೆ ಆ ನಾರಿ ಎಳ್ಳಿನ ಹೊಲ-ಒಳ್ಳೆಯ ಗಂಡನನ್ನು ಬಿಟ್ಟು ಆ ಜೋಗಿಯ ಹಿಂದೆ ಯಾಕೆ ಹೋದಳು? ಅದಕ್ಕುತ್ತರವಾಗಿ "ಅವಳು ಜೋಗಿಯಲ್ಲಿ ಪ್ರೀತಿ ಹುಟ್ಟಿ ಹೋದಳು" ಎಂದು ಹೇಳಬಹುದಾದರೂ ಆ ಪ್ರೀತಿ ಸಾಧುವೆ? ಅಥವಾ ಅದು ಪ್ರೇಮವೆ? ಕಾಮವೆ? ಎಂಬ ಸಂದಿಗ್ಧಗಳು ಹುಟ್ಟಿಕೊಳ್ಳುತ್ತವೆ. ಆಕೆಯ ಗಂಡ ಒಳ್ಳೆಯವ ನಿಜ, ಆದರೆ ಆತ ಅವಳ ಪ್ರೀತಿಯ ಮಟ್ಟಕ್ಕೆ ಏರಲು ವಿಫಲನಾಗಿರಬಹುದೆ? ಅಸಲು ಪ್ರೀತಿಯಲ್ಲಿ ಒಂದು 'ಮಟ್ಟ' ಎನ್ನುವುದಾದರೂ ಇದೆಯೆ? "ಹೃದಯ ಭಾವ ಹೊಮ್ಮಿಸುವುದಕೆ ಭಾಷೆ ಒರಟು ಯಾನ"ವಾಗಿರುವಾಗ ಪ್ರೀತಿಯನ್ನು ಒಂದು ಮಟ್ಟದಿಂದ ಅಳೆಯಲಾದೀತೆ? ಈ ಎಲ್ಲಾ ಪ್ರಶ್ನೆಗಳಿಗಿಂತ ಮೊದಲು ಈ ಕವನ ರಚನೆಗೊಂಡ ಸಾಮಾಜಿಕ ಹಿನ್ನೆಲೆಯನ್ನು ಗಮನಿಸಿದಾಗ ಅದು ಕಟ್ಟಿಕೊಳ್ಳುವ ಅರ್ಥವ್ಯಾಪ್ತಿ ಹೆಚ್ಚು ಸ್ಪಷ್ಟವಾಗುತ್ತದೆ.

ಭಾರತೀಯ ಗ್ರಾಮೀಣ ಸಮಾಜದಲ್ಲಿ 'ಬಾಲ್ಯ ವಿವಾಹ ಪದ್ಧತಿ, ತುಂಬಾ ಪ್ರಾಚೀನ ಕಾಲದಿಂದಲೇ ಬಳಕೆಯಲ್ಲಿತ್ತು. 21ನೇ ಶತಮಾನಕ್ಕೆ ಅಡಿಯಿಟ್ಟಿರುವ ಪ್ರಸ್ತುತ ದಿನಗಳಲ್ಲಿಯೂ ಸಹ ಅಲ್ಲೊಂದು ಇಲ್ಲೊಂದು ಬಾಲ್ಯ ವಿವಾಹದ ಸುದ್ದಿಗಳನ್ನು ಓದುತ್ತಿರುತ್ತೇವೆ. ತುಂಬ ಚಿಕ್ಕ ವಯಸ್ಸಿನಲ್ಲಿಯೇ ಅಂದರೆ ಹುಡುಗ-ಹುಡುಗಿ ಪ್ರಬುದ್ಧಕ್ಕೆ ಬರುವ ಮುಂಚಿತವಾಗಿಯೇ ನೆರವೇರುವ ವಿವಾಹಗಳನ್ನು ಬಾಲ್ಯ ವಿವಾಹ ಎಂದು ಕರೆಯಬಹುದು. ಬಾಲ್ಯ ವಿವಾಹದ ಕಾಲಘಟ್ಟದಲ್ಲಿ ಹೆಣ್ಣು ಮಕ್ಕಳ ಜನಸಂಖ್ಯೆ ಕಡಿಮೆ ಇದ್ದಿರಬಹುದು. ಅಥವಾ ಅದೊಂದು ಕುರುಡು ಸಂಪ್ರದಾಯವಾಗಿ ಬೆಳೆದುಕೊಂಡು ಬಂದಿರಲೂಬಹುದು. ಇಲ್ಲವೇ ಹೆಣ್ಣಿನ ಬೌದ್ಧಿಕ, ದೈಹಿಕ ಸ್ವಾಧೀನತೆಗೆ ಪುರುಷ ಪ್ರಧಾನ ಸಮಾಜ ವ್ಯವಸ್ಥೆ ಇದನ್ನೊಂದು ಅಸ್ತ್ರವಾಗಿ ಬಳಸಿರಲೂಬಹುದು. ಅಂತೂ ಈ ವಿವಾಹಕ್ಕೆ ಸಿಲುಕಿದವರು ಪ್ರಬುದ್ಧಕ್ಕೆ ಬರುವ ಮುಂಚೆಯೇ ಅಂದರೆ ಗಂಡ-ಹೆಂಡತಿ ದಾಂಪತ್ಯ ಸಮಾಗಮ ಮೊದಲಾದ ಸಂಗತಿಗಳ ಸರಳ ತಿಳುವಳಿಕೆಯು ಸಹ ಮೂಡುವ ಮೊದಲೇ ಗಂಡ-ಹೆಂಡತಿಯರಾಗಿ ಬಿಡುತ್ತಿದ್ದರು. ನಂತರ ಹೆಣ್ಣು 'ಋತುಮತಿ'ಯಾದಾಗ 'ಪ್ರಸ್ತ' (ಸಮಾಗಮ) ಕಾರ್ಯವನ್ನು ನೆರವೇರಿಸಿ ಅವರ ದಾಂಪತ್ಯ ಬದುಕಿಗೆ ನಾಂದಿ ಹಾಡಲಾಗುತ್ತಿತ್ತು. ಈ ಪ್ರಕ್ರಿಯೆಯಲ್ಲಿ ಅನೇಕ ಬಾರಿ ಗಂಡಿನ ವಯಸ್ಸು ಹೆಚ್ಚಾಗಿದ್ದು ಹೆಣ್ಣು ಋತುಮತಿಯಾದಾಗ ಆತ ಆದಾಗಲೇ ಮಧ್ಯವಯಸ್ಸಿಗೆ ಬಂದಿರುವ ಸಾಧ್ಯತೆಯೂ ಉಂಟು. ಅಂತೂ ಆತನ ವಯಸ್ಸು ಮುಖಚರ್ಯೆ, ಹಾವ-ಭಾವ, ಅಭಿರುಚಿ, ನಡೆ-ನುಡಿ ಒಟ್ಟು ಆತನ ವ್ಯಕ್ತಿತ್ವ ಹೇಗೇ ಇದ್ದರೂ ಅವಳು ಆತನನ್ನು ಸ್ವೀಕರಿಸುವುದು ಅನಿವಾರ್ಯವಾಗುತ್ತಿತ್ತು. ಇಂತಹ ಸನ್ನಿವೇಶದಲ್ಲಿ ಹೆಣ್ಣು ಅನೇಕ ಬಾರಿ ತನ್ನ ಸಹಜ ಬಯಕೆಗಳನ್ನು ಹತ್ತಿಕ್ಕಿಕೊಂಡು

ಬದುಕಬೇಕಾಗಿತ್ತು, ಕಾರಣ ಅವಳು ವಾಸಿಸುವಸಾಮಾಜಿಕ ಪದ್ಧತಿಗಳು ಆ ತೆರನಾಗಿದ್ದವು (ಈಗಲೂ ಅವು ಬದಲಾಗಿಲ್ಲ ಆ ಮಾತು ಬೇರೆ!). ವಾಸ್ತವವಾಗಿ ಪ್ರತಿ ಹೆಣ್ಣಿಗೂ ತನ್ನ ಜೀವನ ಸಂಗಾತಿಯ ಬಗ್ಗೆ ತನ್ನದೇ ಆದಂತಹ ಸುಂದರ ಕಲ್ಪನೆಗಳು ಇರುತ್ತವೆ. ಅಭಿಪ್ರಾಯಗಳಿರುತ್ತವೆ. ತನ್ನ ಬಾಳಸಂಗಾತಿಯ ಒಂದು ಕುಡಿನೋಟ, ಮುಗುಳ್ನಗು ಅವಳಲ್ಲಿ ನವಿರಾದ ಭಾವನೆಗಳನ್ನು ಮೂಡಿಸಬಹುದು, ಆತನ ನಡೆ ನಿಲುವುಗಳು, ಹಾವ-ಭಾವಗಳು, ಗುಣ-ನಡತೆಗಳು, ಅಭಿಪ್ರಾಯ-ಅಭಿರುಚಿಗಳು ಆತನ ಒಟ್ಟು ವ್ಯಕ್ತಿತ್ವ ಅವಳಲ್ಲಿ ಒಂದು ಬಗೆಯ ಅನುಭೂತಿಯನ್ನು ಹುಟ್ಟಿಸಬಹುದು. ಮುಂದೆ ಸಮಾಗಮದ ಸಂಭರ್ಭದಲ್ಲಿ ಆತನ ಸ್ಪರ್ಶ, ಬಿಸಿಯುಸಿರು, ಅವಳಲ್ಲಿ ರಸ ರೋಮಾಂಚನಗಳನ್ನುಂಟು ಮಾಡಿ ಬೇರೆಯದೆ ಲೋಕಕ್ಕೆ ಕರೆದೊಯ್ದು ಸ್ವರ್ಗಕ್ಕೆ ಕಿಚ್ಚು ಹಚ್ಚಬಹುದು. ಹೀಗೆ ಬಾಳಸಂಗಾತಿಯಿಂದ ಘಟಿಸುವ ಪ್ರತೀ ವಿದ್ಯಮಾನವೂ ಅವಳ ಭಾವಲೋಕವನ್ನು ಹೊಕ್ಕು, ಮೈ-ಮನಗಳನ್ನು ಆವರಿಸಿ ಪರಿಪೂರ್ಣತೆಯ ಒಂದು ಅರ್ಥ ಅನುಭವಗಳನ್ನು ತಂದು ಕೊಡಬಹುದು. ಹೀಗೆ ಮುಂದೆ ಬದುಕಿನುದ್ದಕ್ಕೂ ಈ 'ಸ್ಪಂದನಾಶೀಲತೆ'ಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಎಂತಹ ವಿಷಮ ಪರಿಸ್ಥಿತಿಗಳನ್ನು ಎದುರಿಸಿ ಎರಡು ಜೀವಗಳ ಭಾವಸಂಗಮದೊಂದಿಗೆ ಬದುಕುವುದೇ ನಿಜವಾದ ಪ್ರೀತಿ ಎನಿಸುವುದು. ಇದೇ ಪ್ರೀತಿಯ ಪಕ್ವತೆ. ಇದೇ ಸುಖೀ ದಾಂಪತ್ಯದ ತಿರುಳು. ಊಟ, ನಿದ್ರೆ, ಮೈಥುನಗಳನ್ನು ಮೀರಿ ಪ್ರೀತಿಯ ಆಯಾಮಗಳು ತೆರೆದುಕೊಳ್ಳುವ ಬಗೆಯಿದು. ಅದನ್ನೇ ಬೇಂದ್ರೆ ಅವರು-

**ಅನ್ನಕ್ಕೆ ಬಾಳಾಗಿ ಕಾಮಕ್ಕೆ ಹೋಳಾಗಿ**
**ಮಾನಕೆ ಆಳಾಗಿ ಉಸಿರೆಳೆದುದು**
**ಬಾಳಲ್ಲ ಬದುಕಲ್ಲ; ಜೀವಜೀವಕೆ ಉ-**
**ದ್ದೀಪನವಾದುದೆ ಜೀವನವು**

ಎಂದು ತಮ್ಮ ಸಖೀಗೀತೆಯಲ್ಲಿ ಹೇಳಿದ್ದಾರೆ. ಹೀಗೆ ದಾಂಪತ್ಯ ಬದುಕಿನಲ್ಲಿ ತನ್ನ ಬಾಳಸಂಗಾತಿಯಿಂದ ಇಷ್ಟೆಲ್ಲಾ ಪ್ರಕ್ರಿಯೆಗಳನ್ನು ನಿರೀಕ್ಷಿಸುವ ಹೆಣ್ಣಿಗೆ ಅಕಸ್ಮಾತಾಗಿ ಅವುಗಳು ಸಿಗದೇ ಹೋದರೆ? ಒಂದು ಅವಳು 'ಇದು ನನ್ನ ಕರ್ಮ' ಎಂದು ಜೀವಚ್ಛವದಂತೆ ಬದುಕುಬಹುದು ('ಪ್ರೀತಿ ಇಲ್ಲದ ಜೀವನ ಮರಣಕ್ಕೆ ಸಮಾನ' ಎಂಬ ಗಾದೆ ಇಂತಹವರನ್ನು ಕಂಡೇ ಹುಟ್ಟಿರುವಂತಿದೆ!). ಎರಡು-'ಕಲ್ಯಾಣ ಶಕ್ತಿಯ ಕಾರ್ಯಕುಶಲತೆಯಿಂದ ಪಾಕವಾಗಲಿ ಪ್ರೇಮ...' (ಸಖೀಗೀತ) ಎಂಬ ಆಶಯಗಳೊಂದಿಗೆ ನಿರಂತರ ನಿರೀಕ್ಷೆಗಳಲ್ಲಿ ತನ್ನ ಬದುಕನ್ನು ಸವೆಸಿ ಅದರಲ್ಲಿ ಯಶಸ್ಸುಗೊಳಿಸಬಹುದು. ಮೂರನೆಯದಾಗಿ ಅಂದರೆ ಇವೆರಡೂ ಸಾಧ್ಯತೆಗಳು ಇಲ್ಲದ ಪಕ್ಷದಲ್ಲಿ ಅವಳು ಹೀಗೆ ಜೋಗಿಯ ಹಿಂದೆ ಹೊರಟು ಹೋಗಬಹುದು. ಕಿನ್ನೂರಿ ನುಡಿಸುವವನ ದನಿ ಮೆಚ್ಚಿ, ಬೆರಳಿನಂದವ ಮೆಚ್ಚಿ! ಬಹುಶಃ ತನ್ನ ಮನದಾಳದ ಅನಿಸಿಕೆ, ಅನುಭವಗಳನ್ನು ಅನಾವರಣಗೊಳಿಸಿ ಅದರಂತೆ ಬದುಕುವ ಛಾತಿ ಇರುವುದು ಜನಪದ ಸಾಹಿತ್ಯ ಲೋಕದ ಮಹಿಳೆಗೆ ಮಾತ್ರವೇನೋ! ಈ ಕಥನ ಕವನದ ನಾಯಕಿ 'ಮೊಗ್ಗಾಗಿ ಬಾರೋ ತುರುಬೀಗೆ...' ಎಂದು ಜೋಗಿಯನ್ನು ಆಹ್ವಾನಿಸುವ ರೀತಿಯಂತೂ ಪುರುಷ ಪ್ರಧಾನತೆಗೆ ಪ್ರತಿರೋಧ ಒಡ್ಡುವ ಸಂಗಾತಿಯಾಗಿದೆ. ಆದರೆ ಈ ಪ್ರತಿರೋಧ ಯಾವುದೋ ಒಂದು ಚಪಲಕ್ಕೋ, ಅಹಂಕಾರಕ್ಕೋ ತಳೆದ ಪ್ರತಿರೋಧವಲ್ಲವೆಂಬುದನ್ನು ಇಲ್ಲಿ ಗಮನಿಸಬೇಕು. ಶಿಷ್ಟ ಸಂಪ್ರದಾಯದಲ್ಲಿ ಸಾಮಾನ್ಯವಾಗಿ ಪುರುಷನೊಬ್ಬ ವಿವಾಹೇತರ ಸಂಬಂಧಕ್ಕೆಳೆಸಿದರೆ ಅದನ್ನು ಹೆಂಡತಿಯಾದವಳು ಖಂಡಿಸಿದರೆ ''ಅವನಿಗೇನು ಗಂಡ್ಸು ನಾಕ್ ಹೂವಾ ಮುಡಿತಾನೆ, ನಾವು ಹೆಣ್ಣುಮಕ್ಕಳು ನಮ್ಮ ಪಾಡಿಗೆ ತೆಪ್ಗಿರ್ಬೇಕು..'' ಎಂದು ಹಿರಿಯರಾದ ಹೆಣ್ಣುಮಕ್ಕಳು ಆತನ ವರ್ತನೆಯನ್ನು ಸಮ್ಮತಿಸುವ ಸೂಚನೆಯ ಸ್ಥಿತಿಯಿದೆ! ಅದೇ ಕೆಲಸವನ್ನು ಆತನ ಹೆಂಡತಿಯಾದವಳು ಮಾಡಿದರೆ? ಅದರ ಕತೆಯೇ ಬೇರೆ! ಅಂದರೆ ಈ ಮಾತಿನ ಅರ್ಥ 'ಗಂಡಿ'ಗಿಂತ ಹೆಣ್ಣೇನು ಕಡಿಮೆ? ಆತ ವಿವಾಹಬಾಹಿರವಾಗಿ ನಾಲ್ಕು ಸಂಬಂಧಗಳನ್ನಿಟ್ಟುಕೊಂಡರೆ ಈಕೆ ಎಂಟು ಸಂಬಂಧಗಳನ್ನು ಇಟ್ಟುಕೊಳ್ಳಲಿ' ಎಂದಲ್ಲ, ಪುರುಷನೊಬ್ಬ ಯಾವುದೋ ಚಪಲಕ್ಕೋ, ಮೋಜಿಗೋ, ಅಥವಾ ತನ್ನ ಪೌರುಷ ಮೆರೆಯಲೋ ವಿವಾಹಬಾಹಿರವಾದ ಸಂಬಂಧಕ್ಕೆಳೆಸುವುದಾದರೆ ಮಹಿಳೆ ತನ್ನ ಅಸಹಜ ಬದುಕಿನಿಂದ ಸ್ಪಂದನಾರಹಿತ ದಾಂಪತ್ಯ ಜೀವನದಿಂದ ಹೊರಬರುವ ಪ್ರಯತ್ನ ಅನುಚಿತ ಹೇಗೆ ಎಂಬ ವಿಚಾರ ಜನಪದ ಸಾಹಿತ್ಯ ಲೋಕದಲ್ಲಿ ಆ ರೀತಿಯ ಪ್ರಯತ್ನಗಳಿಗೆ ಆಸ್ಪದವಿದೆ. ಈ ಕಥನಗೀತೆಯ ನಾಯಕಿಯ ಗಂಡ ಒಳ್ಳೆಯವ ನಿಜ. ಆತನೇನು ಅನ್ಯ ಸಂಬಂಧಕ್ಕೆಳೆಸಿದಂತೆ ಕಾಣುವುದಿಲ್ಲ. ಆದರೂ ಆತನೊಂದಿಗೆ 'ಸ್ಪಂದನಾಶೀಲ' ದಾಂಪತ್ಯ ಅವಳಿಗೆ ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣ ಆತನ ವಯಸ್ಸೂ ಇರಬಹುದು. ಅವರಿಬ್ಬರ ನಡುವೆ ವಯಸ್ಸಿನ ಅಂತರ ಅಪಾರವಿದ್ದು ಅವರ ದಾಂಪತ್ಯ ಬದುಕಲ್ಲಿ ಸ್ಪಂದನಾರಹಿತತೆ ತಲೆದೋರಬಹುದು. ಆಗ ಅವಳು ಕಿನ್ನೂರಿ ನುಡಿಸುವವನ ದನಿ ಮೆಚ್ಚಿ ಬೆರಳಿನಂದವ ಮೆಚ್ಚಿ ಅದಮ್ಯ ಜೀವನೋತ್ಸಾಹದೊಂದಿಗೆ ಆತನೊಂದಿಗೆ ಹೊರಡುತ್ತಾಳೆ. ಅವಳಿಗೆ ತನ್ನ ಮೈ-ಮನಗಳ ನರನಾಡಿಗಳನ್ನು ತಟ್ಟಬಲ್ಲ ಪ್ರೀತಿ ಬೇಕು. ಆ ಪ್ರೀತಿಯನ್ನು ಜೋಗಿ ಅವಳಿಗೆ ಕೊಡಬಲ್ಲವನಾಗಿದ್ದಾನೆ. ಈ ಕಥನಕವನದ ನಾಯಕಿ ದಾಂಪತ್ಯದ ಎಲ್ಲೆಯನ್ನು ದಾಟಿದ್ದರೂ ಅವಳ ಪಾತ್ರದ ಗೇಯತೆಗೆ ಧಕ್ಕೆ ಬರುವುದಿಲ್ಲ. ಇಂತಹ ಸಂಗತಿಗಳು ಜನಪದ ಸಾಹಿತ್ಯ ಲೋಕದಲ್ಲಿ ಮಾತ್ರ ಸಾಧ್ಯವೇನೋ! ಅಂಧಪತನದ ಹಾದಿಯಲ್ಲಿ (ಶಿಷ್ಟ ಸಂಪ್ರದಾಯದಲ್ಲಿ ಅದು ಖಂಡಿತವಾಗಿಯೂ ಅಂಧಪತನವೇ ಸರಿ. ಅಲ್ಲಿ ಮಹಿಳೆಯ ಮಾನಸಿಕ ತುಮುಲಗಳಿಗಿಂತ ಸಂಪ್ರದಾಯ ಶರಣತೆಗೆ ಹೆಚ್ಚಿನ ಬೆಲೆ!) ಹೆಣ್ಣನ್ನು ಸಹ ಮಾನವೀಯ ದೃಷ್ಟಿಕೋನದಿಂದ ನೋಡಲಾಗಿದೆ. ಪಾತ್ರಗಳು ಇಲ್ಲಿ ಸಹಜವಾಗಿಯೇ ಅರಳಿಕೊಂಡಿವೆ. ಅದಮ್ಯವಾದ ಜೀವನ

CPMG/KA/BG-8/2003-05 RNI No. 45577/88

*Posted at Basavanagudi P.O. On the 25th of every Month*

*May - 2005*

ಪ್ರೀತಿಯನ್ನು ಉಕ್ಕಿಸುವ ಕಥನಕಾವ್ಯ ಇದಾಗಿದೆ. ಇದೇ ಕಥನಕಾವ್ಯ ವಸ್ತುಶಿಷ್ಟ ಕಾವ್ಯದಲ್ಲಾಗಿದ್ದರೆ? ಅಥವಾ ನಮ್ಮ ಜನ್ನ ಮಹಾಕವಿಯ ಕೈಗೇನಾದರೂ ಈ ಕಾವ್ಯವಸ್ತು ಸಿಕ್ಕದ್ದರೆ? ಇಲ್ಲಿ ಪಾತ್ರಗಳು ಅಮೃತಮತಿ-ಅಷ್ಟಾವಂಕರಂತೆ ಆಕಾರಳ ವಿಕಾರಳವಾಗಿ ಇದು ಇನ್ನೊಂದು ಯಶೋಧರ ಚರಿತೆಯಾಗುತ್ತಿತ್ತು ! ಏನ್ಮಾಡೋದು ಸ್ವಾಮಿ! ಕಾವ್ಯ ವಸ್ತುವೊಂದರ ಪಾತ್ರಗಳು ಕವಿಯ ಮೂಗಿನ ನೇರಕ್ಕೆ ಕುಣಿಯಬೇಕಾದ್ದು ಕಾವ್ಯ ಧರ್ಮ(?)! ಅದು ಅವುಗಳ (ಪಾತ್ರಗಳು) ಕರ್ಮ!

ಜನಪದ ಹಾಗೂ ಶಿಷ್ಟ ಕಾವ್ಯಗಳ ನಡುವಿನ ಅಂತರವು ಕ್ರಮವಾಗಿ ಸಹಜ-ಅಸಹಜಗಳ ನಡುವಿನ ಅಂತರವಾಗಿದೆ. ಜನಪದದಲ್ಲಿ ಯಾವುದು ಸಹಜವೋ ಶಿಷ್ಟದಲ್ಲಿ ಅದು ಅಸಹಜವಾಗಿ ಬಿಡುತ್ತದೆ! (ಜನಪದ ಕಾವ್ಯದಲ್ಲಿ ಶಿಷ್ಟ ಮೌಲ್ಯಗಳು ಅಲ್ಲಲ್ಲಿ ನುಸುಳಿವೆಯಾದರೂ ಅದು ಕಾವ್ಯದ ಒಟ್ಟು ಆಶಯವಲ್ಲ) ಕಾವ್ಯ ವಸ್ತುವೊಂದರ ಪಾತ್ರಗಳು ಜನಪದದಲ್ಲಿ ಜೀವಂತವಾಗಿ ಅರಳಿಕೊಂಡರೆ ಅದೇ ಪಾತ್ರಗಳು ಶಿಷ್ಟದಲ್ಲಿ ಆಕಾರಳ ವಿಕಾರಳವಾಗಿಬಿಡುತ್ತವೆ! ಅದೇನೇ ಇರಲಿ ಈ ಕಥನಗೀತೆಯ ಹಿನ್ನೆಲೆಯಾಗಿ ಸಮಾಜದಲ್ಲಿ ಅನಿಷ್ಟ ಪದ್ಧತಿಯಾಗಿದ್ದ ಬಾಲ್ಯ ವಿವಾಹದ ಪ್ರಭಾವವನ್ನು ಊಹಿಸಬಹುದು. ಇದು ಹೌದಾದರೆ ಬಾಲ್ಯವಿವಾಹ ಪದ್ಧತಿಯ ಉಪೋತ್ಪನ್ನವೇ ಈ ಕಥನಗೀತೆ ಎನ್ನಬಹುದು.

ನಾವಿಂದು ಬಾಲ್ಯವಿವಾಹದ ಆಚೆ ನಡಿಗೆಯನ್ನು ಸಾಗಿಸಿದ್ದೇವೆ. ಆದರೂ ಅನೇಕ ಕಾರಣಗಳಿಂದಾಗಿ ಭಾಗಶಃ ಮಹಿಳೆಯರು 'ಸಂವೇದನಾರಹಿತ' ದಾಂಪತ್ಯ ಜೀವನದ ಸಂಕೋಲೆಗಳಲ್ಲಿ ಸಿಕ್ಕು ನರಳುತ್ತಿದ್ದಾರೆ. ಬದಲಾಗುತ್ತಿರುವ ಪರಿಸ್ಥಿತಿಗಳು ಕಾಲ-ದೇಶಗಳನ್ನು ಮೀರಿ ಅವರ ಸಂಕೋಲೆಗಳಿಗೆ ಹೊಸ ಆಯಾಮಗಳನ್ನು ತಂದುಕೊಡುತ್ತಲಿವೆ. 'ಸಂವೇದನಾಶೀಲ' ದಾಂಪತ್ಯ ನೆಲೆಗೊಳ್ಳಲು ನಮ್ಮ ಸಾಮಾಜಿಕ ಸಂರಚನೆಗಳಲ್ಲಿಯೇ ಬದಲಾವಣೆಗಳಾಗಬೇಕಿದೆ. ಹೊಸ ತಿಳುವಳಿಕೆಗಳು ಮೂಡಬೇಕಿದೆ. ಸ್ಪಂದನಾಶೀಲ ದಾಂಪತ್ಯವು ಸ್ವಸ್ಥ ಕುಟುಂಬದ ತಳಹದಿಯಾಗಿದ್ದು ಸಮಾಜದ ಒಳಿತು ಆದರಲ್ಲಡಗಿದೆ. ಇದು ಸಾಕಾರವಾಗಬೇಕಾದರೆ ನಮ್ಮ ಶಿಕ್ಷಣ ಸೌಲಭ್ಯಗಳು ಗ್ರಾಮೀಣ ಹೆಣ್ಣುಮಕ್ಕಳಿಗೂ ವಿಸ್ತರಿಸಬೇಕಿದೆ. ಮದುವೆಯಂತಹ ಪ್ರಮುಖ ಸಂಗತಿಗಳಲ್ಲಿ ಅದು ಮುಖ್ಯವಾಗಿ ಬಾಳಸಂಗಾತಿ ಆಯ್ಕೆ ವಿಷಯದಲ್ಲಿ ಮಹಿಳೆಯರಿಗೆ ಅವಕಾಶ ಕಲ್ಪಿಸಬೇಕಿದೆ. ಮಹಿಳೆಯ ಮನಸ್ಸಿನ ಭಾವ, ಲಯ, ಅಭಿರುಚಿಗಳಿಗೆ ಅನುಗುಣವಾಗಿ ಅವಳ ಬಾಳಸಂಗಾತಿಯ ಆಯ್ಕೆಯ ಸ್ವಾತಂತ್ರ್ಯ ಅವಳಿಗಿರಬೇಕು. ಇದು ಅವಳ ಹಕ್ಕೂ ಕೂಡ.

❑❑

ಕೃಪೆ : ಮಹಿಳಾ ಅಧ್ಯಯನ

"Achala" 108, Skyline Surabhi,
14 - P, Vidyapeeta Road,
BSK III Stage,
Bangalore - 560 085

To :

Smt/Sri